(Mr. SPEAKER)

much at the time of discussion on the budget because they will have full discussion. This vote on account is meant only just to carry on the administration. So, I appeal to Members to think well before making a departure from the convention. It may happen that this will harm their interest. Once they accept a convention there must be very grave reasons to go back upon it. If in spite of this they want me to stick to rule 170 I have no objection.

Sri J. B. MALLARADHYA.—What is the harm that will happen ?

Mr SPEAKER.—It is not for me to say now.

Sri J. B. MALLARADHYA.—Many a time you have given the ruling that as against an existing rule a convention cannot have priority.

Mr. SPEAKER.---I have not changed that position. If he insists on the rule, convention has no place.

They can send amendments by tomorrow. We will take up the next item now. At the same time I am very sorry that the conventions that have been established in this House are being torpedoed.

Sri V. S. PATIL.—What is the convention ?

Mr. SPEAKER.—The convention is to pass the Vote on Account without debate.

Sri V. S. PATIL.—If that is the convention it can be passed in 2 minutes.

Mr. SPEAKER.—That have has always been done so in Bombay.

Sri V. S. PATIL.—It is not a question of convention. It is a right given to the executive to get a Vote on Account under article 206, but that is taken only in certain circumstances.

Mr. SPEAKER.—I am very sorry that a member who has worked in Assemblies must take up such an attitude. Anyhow, the questian is now settled. The 'vote on account' will be taken up to-morrow or some other day. By to-morrow they can send the amendments.

BUDGET ESTIMATE FOR 1961-62.

General Discussion.

†ಶ್ರೀ ಬಿ. ಕೆ. ಪುಟ್ಟರಾಮಯ್ಯ. (ಚನ್ನಪಟ್ಟಣ).—ಸ್ವಾಮಿ, ಈಗ ನಮ್ಮ ಮುಂದೆ ಹಣಕಾಸಿನ ಸಚಿವರು ಮಂಡಿಸಿರುವ ಬಡ್ಜೆಟ್, ಅವರ ವಾದದ ಪ್ರಕಾರವೇ, hopeless budget ಎನ್ನುವ ರೀತಿಯಲ್ಲಿದೆ. ಯಾವ ಯಾವ ಅಂಕಿಗಳು ಎಲ್ಲೆಲ್ಲಿರಬೇಕು ಎನ್ನುವುದರಲ್ಲಿ ಸ್ವಲ್ಪ ಹೆಚ್ಚುಕಡಮೆ ಅಂಕಿಅಂಶಗಳನ್ನಿಟ್ಟು, ಅದಕ್ಕೆ ಇರುವ ನ್ಯೂನತೆಗಳನ್ನು ಹೇಳುವಾಗ ಒಬ್ಬ ಒಳ್ಳೆಯ ವಕೀಲರು ಒಂದು ಕೇಸಿನಿಂದ ತಪ್ಪಿಸಿಹೊರಕ್ಕೆ ಹೋಗುವುದಕ್ಕೆ ಅನುಕೂಲವಾಗುವಂತೆ ವಾದಮಾಡುವ ರೀತಿಯಲ್ಲ, ಮಾನ್ಯ ಹಣಕಾಸಿನ ಸಚಿವರು ಅವರ ಭಾಷಣದಲ್ಲಿ ಬಹಳ ಸ್ವಾರಸ್ಯವಾಗಿ ಪ್ರತಿಯೊಂದು ಕ್ಲಿಷ್ಟಸಮಸ್ಯೆಗಳಿಂದ ಪಾರಾಗುವುದಕ್ಕೆ ಏನೇನು ವಾದಮಾಡಬಹುದೋ ಅದನ್ನೆಲ್ಲ ಬಹಳ ಬುದ್ಧಿವಂತಿಕೆಯಿಂದ ವಾದಮಾಡಿದ್ದಾರೆ.

ಹೋದಸಾರಿ ನಮ್ಮಮುಂದೆ ಬಡ್ಜೆಟ್ಟನ್ನ ಮಂಡಿಸಿದಾಗ Surplus budget ಎಂದು ಹೇದ್ದರು. ಕೊನೆಗೆ ಈವರ್ಷದಲ್ಲಿ ಹೇಳಿರುವಂತೆ ಅದು deficit budget ಆಗುತ್ತದೆ ಎನುವುದನ್ನು ಅವರೇಒಪ್ಪಿಕೊಂಡಿದ್ದಾರೆ. ಈವರ್ಷವಂತೂ ಡಿಫಿಸಿಟ್‌ಬಡ್ಜೆಟನ್ನೇ ಇಟ್ಟಿದ್ದಾರೆ. ಡಿಫಿಸಿಟ್‌ಬಡ್ಜೆಟ್‌ಗಳು ಕಾಂಗ್ರೆಸ್ ಸರ್ಕಾರಗಳಲ್ಲಿ ಈ ಸಾಲಿನಲ್ಲಿ ಒಂದು fashion ಆಗಿದೆ ಎಂದರೆ ಉತ್ಪ್ರೇಕ್ಷೆ (Exaggeration)ಯಾಗಲಾರದು ಕೇಂದ್ರ ಸರ್ಕಾರದಿಂದ ಮೊದಲ್ಗೊಂಡು ರಾಜ್ಯ ಸರ್ಕಾರಗಳವರಿಗೆ ಎಲ್ಲಕಡೆಯೂ ಖೋತಾ ಬಡ್ಜೆಟನ್ನು ಮಂಡಿಸುವುದು ಒಂದು fashion ಆಗಿದೆಒಂದೇ ಮಾದರಿಯಾದ ಬಡ್ಜೆಟ್ಟನ್ನು ಪ್ರತಿಯೊಂದುಕಡೆಯೂ ಮಂಡಿಸುತ್ತಿದ್ದಾರೆ. ಈ ತರಹ ಖೋತಾಬಡ್ಜೆಟ್ಟನ್ನು ಮಂಡಿಸುತ್ತಿರುವುದರಿಂದ ಕೇಂದ್ರಸರ್ಕಾರಕ್ಕೂ ಮತ್ತು ರಾಜ್ಯಸರ್ಕಾರ ಗಳಿಗೂ ಏನಾದರೂ ಒಂದು understanding ಇದೆಯೋ ಏನೋ ಎನ್ನುವ ಸಂಶಯ ಬರುತ್ತದೆ. ಕೇಂದ್ರ ಸರ್ಕಾರ ಹೊರಲಾರದಷ್ಟು ತೆರಿಗೆಗಳನ್ನೂ ಈ ವರ್ಷಹಾಕಿ, ರಾಜ್ಯಸರ್ಕಾರಗಳಿಗೆ ಅನುಕೂಲವಾಗುವಹಾಗೆ ಬಹುಶಃ ಗ್ರಾಂಟ್‌ರೂಪದಲ್ಲಿ ಕೊಡುತ್ತೇವೆನ್ನುವ ಭರವಸೆಯನ್ನು ಕೊಟ್ಟಿದ್ದಾರೆಯೋ ಏನೋ? ಅದರಿಂದ ರಾಜ್ಯಸರ್ಕಾರಗಳು ಚುನಾವಣೆಯ ಕಾಲದಲ್ಲಿಹೆಚ್ಚು ತೆರಿಗೆಗಳನ್ನು ಹಾಕದೆ ಖೋತಾವನ್ನು ಸಾಲಗಳನ್ನು ಎತ್ತಿ ಅಥವಾ ಹಣಕಾಸಿನಸಚಿವರು ಹೇಳುವ ರೀತಿಯಲ್ಲಿ ಕೆಲವು ಬಾಬುಗಳಮೇಲೆ ಸರ್‌ಚಾರ್ಜ್ ಹಾಕಿ ಸ್ವಲ್ಪ ಭಾಗ ಭರ್ತಿ ಮಾಡುತ್ತಾರೆ ಎಂದು ಕಾಣುತ್ತದೆ ಮತ್ತು ಇನ್ನೂ ಕೆಲವು ಭಾಗವನ್ನು ಯಾವ ರೀತಿಯಿಂದ ಎಷ್ಟರಮಟ್ಟಿಗೆ ಯಾವವಿಧದಲ್ಲಿ ಸರಿಮಾಡುತ್ತೇವೆನ್ನುವುದನ್ನು ತೋರಿಸದೇಯಿರುವುದರಿಂದ ಇದು ಚುನಾವಣೆಯ ಅನುಕೂಲಕ್ಕೋಸ್ಕರ ಒಂದೇ ರೀತಿಯಾಗಿ ಡಿಫಿಸಿಟ್ ಬಡ್ಜೆಟ್‌ಗಳನ್ನು ಇಡೀದೇಶಾದ್ಯಂತ ಮಂಡಿಸಿದ್ದಾರೆಂದು ನಾನು ಖಡಾಖಂಡಿತವಾಗಿ ಹೇಳುತ್ತೇನೆ.

ಸ್ವಾಮಿ ಈ ವರ್ಷದ deficit ಎಂದು ಏನುಹೇಳಿದ್ದಾರೆ ಅದುಕೂಡ ಸರಿಯಿಲ್ಲ, ಇನ್ನೂ ಹೆಚ್ಚು ಖೋತಾ ಬೀಳುತ್ತದೆಂದು ನಾನು ಖಡಾಖಂಡಿತವಾಗಿ ಹೇಳುತ್ತೇನೆ. ಮಾನ್ಯಮಂತ್ರಿ ಗಳು ಹೇಳುವ ಪ್ರಕಾರ 1959–60ರಲ್ಲಿ, Closing cash balance 142–98 ಲಕ್ಷವಿತ್ತು, 1960–61ಕ್ಕೆ–244–44 ಲಕ್ಷವಾಯಿತು. 1961–62ರಲ್ಲಿ ಒಟ್ಟು ಸುಮಾರು ನಾಲ್ಕುಕೋಟಿ ರೂಪಾಯಿಗಳನ್ನು ಉಡಾಯಿಸಿ ಇದನ್ನು ಮುಗಿಸಿ ಇದರ ಜೊತೆಗೆ ಇನ್ನೂ ಎರಡೂ ಚಿಲ್ಲರೆ ಕೋಟಿಯಷ್ಟು ಹಣವನ್ನು ಖರ್ಚುಮಾಡಿದ್ದೀರಿ. ಈ ಸಾರಿ ನೀವು Financial Statement ನಲ್ಲಿ ತೋರಿಸಿರುವುದು 1961-62ರಲ್ಲಿ–539–47 ಲಕ್ಷ ಎಂದು ಹೇಳಿರುತ್ತಾರೆ. ಇದರಂತೆ ನೋಡಿದರೆ ಬಡ್ಜೆಟ್ಟಿನಲ್ಲಿ ಹೇಳಿರುವಂತೆ 431-2, ಡಿಫಿಸಿಟ್ಟು ಎಂದು ಹೇಳಿರುವುದನ್ನು ಇಷ್ಟೇ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇದು ಇನ್ನೂ ಹೆಚ್ಚಾಗುತ್ತದೆ. ನಮ್ಮ ಹಣಕಾಸಿನ ಸಚಿವರು ಉತ್ತರವನ್ನೇನೋ ಹೇಳಬಹುದು. ಅವರು ಇಲ್ಲಿರುವಸ್ಟೇಟ್‌ಮೆಂಟಿನಂತೆ ಕ್ಯಾಷುಬ್ಯಾಲೆನ್ಸ್ 142ಲಕ್ಷ ಎಂದು ಹೇಳಿರುವುದರಿಂದ ಇವರಲ್ಲಿ ಕ್ಯಾಷೇಇಲ್ಲ 1961-62ರಲ್ಲಿ 5ಕೋಟಿ39ಲಕ್ಷ ಎಂದು ಹೇಳಲಾಗಿದೆ. ಇದರ ಜೊತೆಗೆ ಸಪ್ಲಿಮೆಂಟರಿ ಎಸ್ಟಿಮೇಟುಗಳು ಮೂರನೇ ಇನ್‌ಸ್ಟಾಲ್‌ಮೆಂಟು ಬೇರೆಕೊಟ್ಟು ಅದರಲ್ಲಿನ ಅಡ್‌ಜಸ್ಟ್‌ಮೆಂಟುಗಳು ಬೇರೆ ಆಗಬೇಕಾಗಿವೆ.

Sri C. M. ARUMUGHAM.---I am sorry I have to raise this point again and again. You have given a very clear ruling that when discussion on the Budget is taking place, as far possible, all the Ministers should be present. They have left only the Finance Minister to follow the discussion.

Mr. SPEAKER.—He is correct. As far as possible, all the Ministers should be present here. Now the peculiar situation is that it is the question hour in the Upper House.

Sri C. M. ARUMUGHAM.---Even the question hour must be so adjusted that one or two Ministers remain in he other House and the rest are here.

Mr. SPEAKER.—It is not always possible.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸಪ್ಲಿಮೆಂಟರಿ ಎಸ್ಟಿಮೇಟುಗಳ ಮೂರನೇ ಇನ್ಸ್ಟಾಲ್ ಮೆಂಟಿನಲ್ಲಿ 17 ಕೋಟಿ ರೂಪಾಯಿಗಳನ್ನು ಕೇಳಿದಾಗ ಅವರೇ ಹೇಳಿದಂತೆ 639ಲಕ್ಷ ಎಸ್ಟಿಮೇಟುಗಳಿಗಾಗಿ ಆಗುತ್ತದೆ ಎನ್ನುವ ರೀತಿಯಲ್ಲಿಹೇಳಿದ್ದಾರೆ. ಉಳಿದ ಹಣವನ್ನುಎಲ್ಲಿಂದ ತರುತ್ತಾರೆ ಎನ್ನುವುದು ಈ ಬಡ್ಜೆಟ್ಟಿನಲ್ಲಿ ಅರ್ಥವಾಗುತ್ತಿಲ್ಲ. ಇಲ್ಲಿರುವ ಡಿಫಿಸಿಟ್ಟು ಎಂದು ನಾನು ಒಪ್ಪಿಕೊಳ್ಳುವುದಿಲ್ಲ. ಇಂತಹ ಬಡ್ಜೆಟ್ಟನು ನಮ್ಮ ಹಣಕಾಸಿನ ಸಚಿವರು ಮಹಾ ಬುದ್ಧಿವಂತಿಕೆಯಿಂದ ಇಲ್ಲಿ ನಮ್ಮ ಮುಂದೆ ಇಟ್ಟಿದ್ದಾರೆ.

ಶ್ರೀ ಟಿ. ಮರಿಯಪ್ಪ.—ಇವೆಲ್ಲಾ ರಿವೈಸ್ಡ್ ಎಸ್ಟಿಮೆಂಟಿನಲ್ಲೇ ಬರುತ್ತದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಇದನ್ನೇ ಒಂದು ರೀತಿಯಾದ ಕನ್‌ವೆನ್‌ಷನ್ ಎನ್ನುವ ರೀತಿಯಲ್ಲಿ ಮಾಡಿಕೊಂಡು ಬಿಟ್ಟರೆ ನಮಗೆ ಬಹಳ ಕಷ್ಟವಾಗುತ್ತದೆ. ಇಷ್ಟು ಡಿಫಿಸಿಟ್ಟು ಹಣವನ್ನು ಭರ್ತಿಮಾಡಲು ಏನು ಯೋಜನೆ ಮಾಡಿದ್ದೀರಿಎಂದು ಕೇಳಿದರೆ, ಸಾಲಮಾಡುತ್ತೇವೆಂದು ಹೇಳುತ್ತಾರೆ. ಯಾವಾಗಲು ಯಾವ ಮಾತನ್ನು ಎತ್ತಿದರೂ ಆಗ ಸಾಲ ಮಾಡುತ್ತೇವೆಂದು ಹೇಳುತ್ತಾರೆ. ಇದಕ್ಕೆ ಬದಲಾಗಿ ಯಾವುದಾದರೂ ಉದ್ಯಮವನ್ನು ಮಾಡಿ ಇಂತಹ ಉದ್ಯಮಗಳಿಂದ ಇಷ್ಟು ಹಣಬರುತ್ತದೆ ಮತ್ತು ಇದರಿಂದ ಡಿಫಿಸಿಟ್ಟನ್ನು ಸರಿದೂಗಿಸಿ ಕೊಳ್ಳುತ್ತೇವೆ ಎಂದು ಏನೂ ಇಲ್ಲಿ ಹೇಳಿಲ್ಲ ನಿಜವಾಗಿಯೂ ಟ್ಯಾಕ್ಸುಗಳನ್ನು ಹಾಕಿಲ್ಲ ಎಂದು ಬುದ್ಧಿವಂತಿಕೆಯಿಂದ ಹೇಳಿರುವುದನ್ನು ನೋಡಿದರೆ ಇದು "Actually this is only an Election stunt" ಎಂದು ಹೇಳಿದರೆ ತಪ್ಪಾಗುವುದಿಲ್ಲ. ಡಿಫಿಸಿಟ್ಟನ್ನು ಬರ್ತಿಮಾಡಿಕೊಳ್ಳಲು ಒಂದು ಚಿಲ್ಲರೆ ಕೋಟಿಯಷ್ಟನ್ನು ಲ್ಯಾಂಡ್‌ರೆವಿನ್ಯೂ ಮೇಲೆ ಸರ್‌ಚಾರ್ಜ್ ಹಾಕುತ್ತೇವೆಂದು ಹೇಳಿದ್ದಾರೆ. ಈ ರೀತಿಯಾಗಿ ಲ್ಯಾಂಡು ರೆವನೂ ಸರ್‌ಚಾರ್ಜ್ ಎಂದು ಹೇಳಿವಾಗ ಲ್ಯಾಂಡು ರಿಫಾರಂಸ್ ಎನ್ನುವುದು ಯಾವತರಹದಲ್ಲಿ ಬರುತ್ತದೆ? ಇದು ಬರುತ್ತದೆಯೋ ಇಲ್ಲವೋ ಎನ್ನುವ ಅನುಮಾನವೂ ಕೂಡ ಬರುತ್ತಿದೆ. ಲ್ಯಾಂಡು ರಿಫಾರಂಸು ಬಂದ ಮೇಲೆ ಈ ರೀತಿಯಾಗಿ ಲ್ಯಾಂಡು ರೆವಿನ್ಯೂ ಮೇಲೆ ಹಾಕುವುದಕ್ಕೆ ಆಗುವುದಿಲ್ಲ ಮುಂದೆ ಎಲೆಕ್ಷನ್ನು ಬರುತ್ತದೆ ಎಂದು ಚಿಕ್ಕ ಜಮೀನುದಾರರಮೇಲೆ ಸರ್‌ಚಾರ್ಜ್ ಹಾಕಬಾರದು ಎಂದು ಒಂದು ಕಡೆ ಇದ್ದರೆ, ದೊಡ್ಡಜಮೀನುದಾರರಿಗೆ ಹೇಗೆ ಈ ಸರ್‌ಚಾರ್ಜನ್ನು ಹಾಕವುದು, ಇದನ್ನು ಹಾಕಿದರೆ ನಮಗೆ ಓಟು ಸಿಗುವುದಿಲ್ಲ ಎಂದು ಈ ರೀತಿಯಾಗಿ ಇಲ್ಲಿ ಬುದ್ಧಿವಂತಿಕೆಯಾದ ಬಡ್ಜೆಟ್ಟನ್ನು ಇಟ್ಟಿದ್ದಾರೆ.

Sri C. M. ARUMUGHAM.—Even otherwise, they have already joined the Swatantra Party. The Land-Lords are not going to vote for the Congress.

Sri B. K. PUTTARAMIAH.—I and you and also the Finance Minister know them. Why should we comment on them because they are not here? ಇಲ್ಲಿ ಸರ್‌ಚಾರ್ಜ್ ಹಾಕುವುದೊಂದನ್ನು ಮಾತ್ರ ತೋರಿಸಿ ಇನ್ನಾವುದನ್ನೂ ತೋರಿಸದೆ ಇಲ್ಲಿಟ್ಟಿದ್ದಾರೆ. ಇದಕ್ಕಾಗಿ ಮುಂದೆ ಬಿಲ್ಲನ್ನು ತರುತ್ತೇನೆ, ಆಗ ಇದರ ಬಗ್ಗೆ ಹೇಳಬಹುದು ಎಂದು ಹೇಳಬಹುದು. ಈಗ ಈ ಬಡ್ಜೆಟ್ಟನ್ನು ನಾವು ಓಟು ಮಾಡಬೇಕಾಗಿದೆ. ನಮಗೆ ಇದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಅದರಿಂದ ಈಗ ಇಲ್ಲಿ ಹೇಳಬೇಕಾಗಿದೆ ಈ ಸರ್‌-ಚಾರ್ಜಸ್ ಜೊತೆಗೆ ಗ್ಯಾಪನ್ನು ಭರ್ತಿ ಮಾಡಿಕೊಳ್ಳಲು ಎಲೆಕ್ಟ್ರಿಸಿಟಿ ಕನ್‌ಸ್ಯೂಮರು ಮೇಲೆ ಹಾಕುತ್ತೇವೆಂದು ಹೇಳಿದರು. ಹೀಗೆ ಹೇಳುವಾಗ ಕನ್‌ಸ್ಯೂಮರು ಮೇಲೆ ಹಾಕುತ್ತೀರಾ,

ಇಂತಹ ಇಂಡಸ್ಟ್ರಿಗಳ ಮೇಲೆ ಹಾಕುತ್ತೀರಾ? ಅಥವಾ ಇನ್ನಾವುದರ ಮೇಲೆ ಹಾಕುತ್ತೀರಿ ಎನ್ನುವುದನ್ನು ನಿಗದಿಯಾಗಿ ಹೇಳಬೇಕಾಗಿತ್ತು. ಬಡವರ ಮೇಲೆ ಬೀಳುತ್ತದೆಯೇ, ದೊಡ್ಡ ದೊಡ್ಡ ಉದ್ಯಮಿಗಳ ಮೇಲೆ ಬೀಳುತ್ತದೆಯೇ ಎನ್ನುವುದನ್ನು ಒಂದು ರೀತಿಯಾದ ಕ್ಲಾರಿಫಿಕೇಷನ್ನನ್ನು ಕೊಡುವುದಕ್ಕೆ ಇದ್ದ ಕಷ್ಟವಾದರೂ ಏನು? ಈ ರೀತಿಯಾಗಿ ನಮ್ಮ ಹಣ ಕಾಸಿನಸಚಿವರು ಇದನ್ನು ಕ್ಲಾರಿಫೈ ಮಾಡಿದ್ದರೆ ಸೂಕ್ತವಾಗಿರುತ್ತಿತ್ತು. ಹಾಗೆ ಹೇಳದೆ ಸುಮ್ಮನೆ ವೋಟು ಮಾಡುವುದರಿಂದ ಇದು ಸರಿಯಾಗಿ ಕಾಣುವುದಿಲ್ಲ?

ಈಗ ಸರ್ಕಾರದ ಪಾಲಿಸಿ ದೇಶವನ್ನು ಏಳಿಗೆಗೆ ತರಬೇಕೆಂಬುದಾಗಿರುವಾಗ ಯಾವ್ಯಾವ ದಾರಿಯಿಂದ ಹಣವನ್ನು ಹೆಚ್ಚಿಸಬೇಕು, ಯಾವ್ಯಾವ ದಾರಿಯಿಂದ ಜನಗಳಿಗೆ ಅನುಕೂಲವನ್ನು ಕಲ್ಪಿಸಿಕೊಡಬೇಕು ಎಂಬುದನ್ನು ಯೋಚನೆ ಮಾಡಬೇಕು. ಅದನ್ನು ನೀವು ಮಾಡುತ್ತಿಲ್ಲ. ನೀವು ಹೋಗುತ್ತಿರುವ ದಾರಿ ನಿಜವಾಗಿ ಸರಿಯಾದುದಲ್ಲ. ನೀವು ಹೋಗುತ್ತಿರುವ ದಾರಿ ಒಳ್ಳೆಯದು ಎಂದು ಕಂಡುಬಂದರೆ ನೀವು ಇಲ್ಲಿ ಹೇಳುತ್ತಿರುವುದನ್ನು ಒಂದು ವೇಳೆ ಸರಿತೂಗಿಸುವುದಕ್ಕೆ ಏನೇನು ವ್ಯವಸ್ಥೆಯನ್ನು ಮಾಡಿದ್ದೀರಿ ಎಂಬುದನ್ನು ತಿಳಿಸಿ, ಇಷ್ಟೆಲ್ಲಾ ನೀವು ಜನತೆಯ ಓಟನ್ನು ಗಳಿಸುವುದಕ್ಕೆ ಮಾತ್ರ ಮಾಡುತ್ತಿದ್ದೀರಿ ಎಂದು ನನಗೆ ತೋರುತ್ತದೆ. ಪ್ರತಿ ಸಾರಿಯೂ ದೇಶದಲ್ಲಿ ಹಣಕಾಸಿನ ಸಮಸ್ಯೆ ಬಗ್ಗೆ ಈಗ ನೀವು ಏನೊಂದು ಮಾಡಬೇಕೆಂದಿದ್ದೀರೋ ಅದು ಸರಿಯಲ್ಲ. ಹಿಂದಿನ ಸರ್ಕಾರದಲ್ಲಿದ್ದ ಕಾಲದಲ್ಲಿ ರಿಸೋರ್ಸಸ್ ಎಲ್ಲಿಲ್ಲದೆ, ಹೇಗೇಗೆ ಮಾಡಬೇಕು ಏನೇನು ಮಾಡಬೇಕು, ಎನ್ನುವ ದೃಷ್ಟಿಯಿಂದ ಯಾವ ಯಾವ ಕಮಿಟಿಗಳನ್ನು ಮಾಡಿದ್ದರೋ ಆ ಕಮಿಟಿಗಳ ಒಂದು ಶಿಫಾರ್ಸನ್ನೂ ಸಹ ನೀವು ಮನ್ನಣೆ ಮಾಡುತ್ತಿಲ್ಲ. ಹಿಂದೆ ಮಾಡಿರತಕ್ಕ ಕಮಿಟಿ ರಿಪೋರ್ಟುಗಳನ್ನು ನೀವು ಗಣನೆಗೆ ತೆಗೆದುಕೊಂಡು ದೇಶದಲ್ಲಿ ಅವುಗಳನ್ನು ಜಾರಿಗೆ ತಂದಿದ್ದರೆ ಇಷ್ಟು ಸಾಲ ಸೋಲಗಳಿಗೆ ಅವಕಾಶವೇ ಇರುತ್ತಿರಲಿಲ್ಲ. ಹಿಂದೆ ಯಾವ ಸಿಂಕಿಂಗ್ ಫಂಡ್ ಎಂಬ ಐಟಂ ಇತ್ತೋ ಅದನ್ನು ಈಗ ತೆಗೆದುಹಾಕಿ ಸುಮ್ಮನೆ ಬೀದಿ ಬೀದಿಯಲ್ಲಿ ನಿಂತಿರುವ ಹಾಗೆ ಸಾಲಕ್ಕೆ ಹೊರಟಿದೀರಿ. ಇದರಿಂದ ಎಷ್ಟರಮಟ್ಟಿಗೆ ಸರ್ಕಾರದ ಮೇಲೆ ಜನತೆಗೆ ವಿಶ್ವಾಸವಿರುತ್ತದೆಂಬುದನ್ನು ಯೋಚನೆ ಮಾಡಬೇಕು. ಆ ಕಮಿಟಿ ರಿಪೋರ್ಟುಗಳಿಗೆ ಇವರು ನಿಜವಾಗಿ ಮನ್ನಣೆ ಕೊಟ್ಟಿದ್ದರೆ ಇಷ್ಟು ಸಾಲಾ ಖಂಡಿತವಾಗಿ ಸರ್ಕಾರಕ್ಕೆ ಆಗುತ್ತಿರಲಿಲ್ಲವೆಂದು ನಾನು ಹೇಳುತ್ತೇನೆ. ಇಂತಹ ಕಮಿಟಿಗಳನ್ನು ನೀವು ರಚನೆಮಾಡುವಾಗ ಆ ಕಮಿಟಿಗಳಲ್ಲಿರ ತಕ್ಕಂಥ ಎಕ್ಸ್‌ಪರ್ಟ್ಸ್‌ಗಳಿಂದ ಒಂದು ವರದಿಯನ್ನು ತೆಗೆದುಕೊಂಡು ಬಹುಶಃ ಈ ಬಡ್ಜೆಟ್ ತಯಾರು ಮಾಡುವುದರೊಳಗೆ ನಿಮಗೆ ಬೇಕಾದಷ್ಟು ಅಂಕಿ ಅಂಶಗಳನ್ನು ಅವರೇ ಒದಗಿಸಿಕೊಟ್ಟು ಇಂತಹ ಖೋತಾ ಬಡ್ಜೆಟ್ಟುಗಳನ್ನು ಸರಿತೂಗಿಸುವುದಕ್ಕೆ ಏನಾದರೂ ಸಲಹೆಗಳನ್ನು ಕೊಡುತ್ತಿದ್ದರು. ಆ ರೀತಿ ನೀವು ಮಾಡದೆ ಸಾಲಮಾಡಲಿಕ್ಕೆ ಹೊರಟಿದ್ದೀರಿ. ಇನ್ನು ಕೆಲವು ಕಡೆಗಳಲ್ಲಿ ಸಾಲ ಮಾಡುವ ಪರಿಸ್ಥಿತಿಯಲ್ಲಿ ನಾವಿಲ್ಲವೆಂದು ಹೇಳಿಕೊಳ್ಳುತ್ತೀರಿ. ಈಗ ನಾವು ಸಾಲಾ ಕೇಳುವುದಕ್ಕೆ ಹೋದರೆ ಕೇವಲ ಐದು ನಿಮಿಷಗಳಲ್ಲಿ ನಮಗೆ ಎಷ್ಟೋ ಸಾಲಾ ದೊರೆಯುತ್ತದೆ. ಸಾಲಾ ನಮಗೆಷ್ಟುಬೇಕೋ ಅದಕ್ಕಿಂತಲೂ ಹೆಚ್ಚಿಗೆ ನಮಗೆ ಜನರು ಹಣವನ್ನು ಸಬ್‌ಸ್ಕ್ರೈಬ್ ಮಾಡುತ್ತಾರೆಂದು ಇವರು ಹೇಳುತ್ತಿದ್ದಾರೆಯೇ ವಿನಹ ಸಾಲಾ ತೀರಿಸುವುದಕ್ಕೆ ಇಂತಹ ದಾರಿಗಳನ್ನು ಮಾಡಿದ್ದೇವೆ, ಇಷ್ಟು ವರ್ಷಗಳಲ್ಲಿ ಇಷ್ಟು ಸಾಲಾ ತೀರಬೇಕು, ಇಷ್ಟು ಹಣವನ್ನು ಪ್ರತಿವರ್ಷವೂ ಬಡ್ಜೆಟ್ಟಿನಲ್ಲಿ ಈ ಬಾಬಿಗೆ ಒದಗಿಸಿದ್ದೇವೆಂದು ಒಂದು ಅಂಕಿ ಅಂಶವೂ ಹಣಕಾಸಿನ ಸಚಿವರ ಭಾಷಣದಲ್ಲಿ ಬಂದಿಲ್ಲ. ಅದು ಸರ್ಕಾರದ ದುರ್ಭಾಗ್ಯವೆಂದೇ ಹೇಳಬೇಕಾಗಿದೆ. ದೇಶದ ಹಿತರಕ್ಷಣೆಯ ಬಗ್ಗೆ ಸರ್ಕಾರ ಏನೇನೂ ಗಣನೆಗೆ ತೆಗೆದುಕೊಳ್ಳದೆ ಈ ದೇಶವನ್ನು ಮಾರುವ ಸ್ಥಿತಿಗೆ ಇವತ್ತು ಇಳಿದಿದೆ ಎಂದು ಹೇಳಿದರೆ ಅದೇನೂ ತಪ್ಪಾಗಲಾರದು. ತಾವು ಹಣಕಾಸಿನ ಸಚಿವರು ಆದಾಗ 1957ರಲ್ಲಿ 121 ಕೋಟಿ ರೂಪಾಯಿಗಳ ಸಾಲವಿತ್ತು. ಈಗ 1961–62 ರಲ್ಲಿ ತಾವು ಬಿಟ್ಟು ಹೋಗುವಾಗ ಆ ಸಾಲವನ್ನು 157 ಕೋಟಿ ರೂಪಾಯಿಗಳಿಗೆ ಏರಿಸಿದ್ದೀರಿ. ಅಂದ ಮೇಲೆ

(ಶ್ರೀ ಬಿ. ಕೆ. ಪುಟ್ಟರಾಮಯ್ಯ)

ಹಿಂದಿನ ಸಾಲವನ್ನು ತೀರಿಸುವುದಕ್ಕೆ ಯಾವುದಾದರೂ ಒಂದು ರೀತಿಯಾದ ವ್ಯವಸ್ಥೆಯನ್ನು ಮಾಡಿದ್ದೀರಾ ಎಂದರೆ ಅದೂ ಇಲ್ಲ.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಶಾಖೆಯ ಮಂತ್ರಿಗಳು).—ಪ್ರತಿವರ್ಷವೂ ಕಂತಿನ ಪ್ರಕಾರ ಆ ಬಾಬಿಗೆ ಕೊಡುತ್ತಿದ್ದೇವೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಹೋದಸಲ ಬೇರೆ ಸಾಲ ಮಾಡಿದ್ದೀರಿ. ಆ ಸಾಲಇನ್ನೂ ತೀರಿಸಬೇಕು. ಈಗಲೂ ದೇಶಕ್ಕೆ ಮೋಸಮಾಡಿದ್ದೀರಿ. ಅನ್ಯಾಯವಾಗಿ ಓಟುಗಳಿಸುವುದಕ್ಕೆ ಈ ನೀತಿಯನ್ನು ಹಾಕಿಕೊಂಡಿದ್ದೀರಿ. ಸಾಲಾ ತೀರಿಸಲು ಮತ್ತೆ ಬೇರೆ ಸಾಲಾ ಮಾಡುತ್ತೇವೆಂದು ಹೇಳುತ್ತೀರಿ. ಈ ಸಾಲಕ್ಕಾಗಿ ಏನಾದರೂ ನಿಧಿಯನ್ನು ಇಟ್ಟಿದ್ದಾರೆಯೇ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವಿಲ್ಲದಂತಹ ಅಂಕಿಅಂಶಗಳನ್ನು ಕೊಟ್ಟಿದ್ದೀರಿ. ಸುಮ್ಮನೆ ಬಾಯಲ್ಲಿ ಪ್ರತಿವರ್ಷವೂ ಸಾಲಾ ತೀರಿಸುವುದಕ್ಕೆ ಬಡ್ಜೆಟ್ಟಿನಲ್ಲಿ ಹಣವನ್ನೊದಗಿಸುತ್ತಿದ್ದೇವೆಂದು ಹೇಳುತ್ತೀರಿ. ಬೇಕಾದಷ್ಟು ನಮ್ಮಲ್ಲಿ ಆಸ್ತಿ ಇದೆ ಎಂದು ಬೇರೆ ಹೇಳುತ್ತೀರಿ. ಆ ಸಾಲಕ್ಕೆ ಶೇ. 3, 3½ ಅಥವಾ ಶೇ. 5, 5½ ಯಂತೆ ಬಡ್ಡಿಬೇರೆ ಹಾಕುತ್ತಾರೆ. ಆದ್ದರಿಂದ ನೀವು ಸಾಲಾ ತೀರಿಸುವುದಕ್ಕೆ ಏನು ಪ್ರಯತ್ನಮಾಡುತ್ತಿದ್ದೀರಿ? ಸಿಂಕಿಂಗ್‌ಫಂಡ್ ಏನಾದರೂ ಆರೇಂಜ್ ಮಾಡಿದ್ದೀರಾ? ಪ್ರತಿ ವರ್ಷವೂ ಸಾಲಾ ತೀರಿಸುವುದಕ್ಕೆ ಇಷ್ಟು ಹಣವನ್ನೊದಗಿಸಿದೆ ಎಂದು ಹೇಳುವುದಕ್ಕೆ ನಿಮ್ಮ ಕೈಲಿ ಆಗುತ್ತದೆಯೇ?

Sri S. D. KOTHAWALE (Chikodi).—The balance at the Credit of Sinking Fund as on 1st April 1960 is Rs. 1833.88 lakhs. Since most of the Government of India loans are repayable in annual instalments, no Sinking Fund is created for them.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಕೊನೆಗೆ ನೀವು ದೇಶವನ್ನು ಹಾಳುಮಾಡಲು ಯತ್ನಿಸುತ್ತಿದ್ದೀರಿ. ಮುಂದಿನ ಚುನಾವಣೆಯಲ್ಲಿ ಹೇಗಾದರೂ ಓಟು ಗಿಟ್ಟಿಸಿಕೊಳ್ಳಬೇಕೆಂದಿದ್ದೀರಿ. ದೇಶ ಹರಾಜು ಆಗಿ ಹೋಗಲಿ ಅದನ್ನು ಬಿಚ್ಚಿ ತೋರಿಸಬಾರದು ಎಂದು ಸರ್ಕಾರ ಮಹಾ ಬುದ್ಧಿವಂತರಾದ ಶ್ರೀ ಮರಿಯಪ್ಪನವರನ್ನು ಹಣಕಾಸಿನ ಮಂತ್ರಿಗಳಾಗಿಟ್ಟುಕೊಂಡು ಅವರ ಮೂಲಕ ಅವರ ಬುದ್ಧಿವಂತಿಕೆಯನ್ನು ದೇಶೋದ್ಧಾರಕ್ಕಾಗಿ ಬಳಸುವ ಬದಲು maneuoring of figures to catch the votes ಇಂಥಾದ್ದಕ್ಕೆಲ್ಲಾ ಏಕೆ ಉಪಯೋಗಿಸುತ್ತಿದ್ದೀರಿ ಎಂದು ನಾನು ಕೇಳುತ್ತೇನೆ. ನನಗೆ ಇದರಿಂದ ಬಹಳ ವ್ಯಸನವಾಗುತ್ತದೆ. ನಿಮ್ಮ ಅಂಕಿ ಅಂಶಗಳು ನಿಮ್ಮನ್ನು ಯಾವುದಕ್ಕೂ ಸಿಕ್ಕಿಸುವುದಕ್ಕೆ ಅವಕಾಶವಿಲ್ಲದ ಹಾಗೆ ಇವೆ. ನಿಮ್ಮ ಪೂರ್ಣ ಬುದ್ಧಿ, ಶ್ರಮವನ್ನು ದೇಶಕ್ಕಾಗಿ ಆಗಬೇಕಾದ ಅನುಕೂಲಕ್ಕೋಸ್ಕರ ಕೊಡುವುದನ್ನು ಬಿಟ್ಟು ಸರ್ಕಾರದ ಅನುಕೂಲಕ್ಕೋಸ್ಕರ ಮಾತ್ರ ಕೊಟ್ಟಿದ್ದೀರಿ ಎಂದು ನಾನು ಹೇಳದೆ ವಿಧಿಯಿಲ್ಲ. ಇಷ್ಟೊಂದು ಡಿಫಿಸಿಟ್ ಬರುವುದು ಏತರಿಂದ ಎನ್ನುವುದು ನಿಮ್ಮ ಹಣಕಾಸಿನ ಪರಿಸ್ಥಿತಿ ಬಗ್ಗೆ ನೀವು ಹಣವನ್ನು ಖರ್ಚುಮಾಡುವ ವಿಧಾನ ಸರಿಯಾಗಿಲ್ಲವೆಂಬುದು, ಅದಕ್ಕೆ ಒಂದೆರಡು ದೃಷ್ಟಾಂತರಗಳನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈಗ ಜನರಲ್ ಅಡ್ಮಿನಿಸ್ಟ್ರೇಷನ್ ತೆಗೆದುಕೊಳ್ಳಿ—ಮಂತ್ರಿಗಳದೇ ಮೊದಲು ತೆಗೆದುಕೊಳ್ಳೋಣ. ಈಗಲೇ ದೇಶದಲ್ಲಿ ಹಣದ ಕೊರತೆ ಇದೆ. ಸಾಲಾ ಎಷ್ಟೋ ಮಾಡಬೇಕಾಗಿದೆ. ಸಾಲವನ್ನೂ ತೀರಿಸಬೇಕಾದ ಸ್ಥಿತಿ ಇದೆ. ಈಗ ನೀವು ಹೊಸದಾಗಿ ಸೇರಿಸಿಕೊಂಡ ಮಂತ್ರಿಗಳ ಸಂಬಳವನ್ನೂ ಅವರಿಗೆ ಸಂಬಂಧಪಟ್ಟ ಆಡಳಿತ ವರ್ಗದವರ ಖರ್ಚನ್ನು ಈ ಬಡ್ಜೆಟ್ಟಿನಲ್ಲಿ ತೋರಿಸಲಿಲ್ಲ. ಹಿಂದಿನ 16 ಜನ ಮಂತ್ರಿ ಮತ್ತು ಉಪಮಂತ್ರಿಗಳಿಗೆ ಏನೇನು ಖರ್ಚು ವೆಚ್ಚಗಳನ್ನು ಮಾಡಬೇಕೋ ಅದನ್ನು ಮಾತ್ರ ತೋರಿಸಿದ್ದೀರಿ. ಮುಂದಕ್ಕೆ ಎಷ್ಟು ಚಾರ್ಜಾಗುತ್ತದೆಂಬುದನ್ನೂ ತೋರಿಸಿಲ್ಲ. ದೇಶದ ಹಣವನ್ನು ಅಡವಿಟ್ಟು ಅವರಿಂದ ಸಾಲಾ

ತೆಗೆದುಕೊಂಡು ಅವರಲ್ಲಿ ಕೆಲವರಿಗೆ ಉದ್ಯೋಗವನ್ನು ಕಲ್ಪಿಸಿಕೊಡುವುದಕ್ಕೋಸ್ಕರ ಈ ನಾಲ್ಕು ಜನಗಳಿಗೆ ಮಂತ್ರಿಪದವಿಯನ್ನು ಕೊಟ್ಟು ದೇಶದ ಹಣವನ್ನು ತುಂಬಲಿಕ್ಕಾಗಿ ಅಲ್ಲಿ ಇಲ್ಲಿ ಭಿಕ್ಷೆ ಬೇಡಬೇಕೆಂದು ತಾವು ಕೂತಿದ್ದೀರಿ. ಇಗ ಈ ನಾಲ್ಕು ಜನ ಮಂತ್ರಿಗಳನ್ನು ಹೆಚ್ಚಿಸಿರುವುದರಿಂದ ಖರ್ಚು ಎಷ್ಟು ಆಯಿತು ಎಂಬ ಲೆಕ್ಕವನ್ನೂ ಸಹ ಕೊಟ್ಟಿಲ್ಲ ಇದರಿಂದ ಎಷ್ಟೋ ಹಣ ಕಡಿಮೆ ಖರ್ಚು ಆಗುತ್ತದೆ. ಮಂತ್ರಿಗಳಿಗೆ ಕೊಡುವ ಸಂಬಳದಿಂದ ಮಂತ್ರಿಗಳಿಗೆ ಆಗಬೇಕಾದ ಮನೆಗಳಿಂದ, ಅವರಿಗೆ ಆಗಬೇಕಾದ ಹೊದಿಕೆ, ಕಟ್ಲರಿ, ಕ್ರಾಕರಿ ಸೌಕರ್ಯಗಳಿಂದ, ಅವರ ಡ್ರೈವರ್ ಮತ್ತು ಕಾರಿನಿಂದ, ಆಗುತ್ತಿರುವ ಖರ್ಚು ವೆಚ್ಚವನ್ನು ತೋರಿಸುವುದಕ್ಕೆ ಬದಲು ಬರೀ ಸಂಬಳ ಲೆಕ್ಕವನ್ನು ಮಾತ್ರ ಕೇವಲ ಒಂದು ದೃಷ್ಟಿಯಿಂದ ಜನಗಳಿಗೆ ತೋರಿಸುತ್ತಿದ್ದೀರಿ. ಕೇವಲ 900–250 ರೂಪಾಯಿಗಳ ಸಂಬಳವೆಂದು ತೋರಿಸುತ್ತೀರಿ. ತಾವು ಇರುವ ಒಂದೊಂದು ಮನೆಯೂ, 500, 1,000, 2,000 ದಂತೆ ಬಾಡಿಗೆ ತಿಂಗಳಿಗೆ ಕೊಡತಕ್ಕುದಾಗಿದೆ. ಅಂತಹ ಮನೆಗಳಲ್ಲಿ ನೀವು ವಾಸಮಾಡುತ್ತಿದ್ದೀರಿ. ಇವತ್ತು ಹಣದಕೊರತೆ ದೇಶದಲ್ಲಿರುವಾಗ ಅಂತಹ ಮನೆಗಳನ್ನು ಬೇರೆಯವರಿಗೆ ಬಾಡಿಗೆಗೆ ಕೊಟ್ಟು ಇದರಿಂದ 2–3 ಸಾವಿರ ರೂಪಾಯಿಗಳ ಆದಾಯವನ್ನು ತಿಂಗಳು ಒಂದಕ್ಕೆ ಸರ್ಕಾರ ತೆಗೆದುಕೊಂಡು 100, 150, 200, ರೂಪಾಯಿಗಳ ಬಾಡಿಗೆ ಬರುವಂತಹ ಕಡೆಗಳಲ್ಲಿ ಏಕೆ ನೀವು ವಾಸಿಸಬಾರದು ! ಇದು ಪರ್ಸನಲ್ ವಿಷಯ. ಆ ಬಗ್ಗೆ ನಾನು ಮಾತನಾಡಬಾರದು. ಒಬ್ಬೊಬ್ಬರೂ 2–3 ಸಾವಿರ ರೂಪಾಯಿಗಳ ಬಾಡಿಗೆ ತಿಂಗಳಿಗೆ ಸರ್ಕಾರಕ್ಕೆ ಬರುವಂತಹ ಮನೆಗಳಲ್ಲಿರುವುದರಿಂದಲೇ ಈ ರೀತಿ ಸರ್ಕಾರಕೆ ಸಾಲಾ ದಿನೇ ದಿನೇ ಹೆಚ್ಚುತ್ತಿದೆ.

2–30 P.M.

ಕರ್ಟನಿನಿಂದ ಹಿಡಿದು ಪಾಡಿವಾಲವರೆಗೆ; ಎಲೆಕ್ಟ್ರಿಸಿಟಿ ಉಪಯೋಗಿಸಿ ಕೊಳ್ಳುವುದು, ವಾಲಗಳು, ಅಡಿಗೆಯವನು ಮುಂತಾದ ಅನುಕೂಲಗಳು, ಬಟ್ಟೆ ಒಗೆಯುವುದು ಮೊದಲುಗೊಂಡು ಪ್ರತಿಯೊಂದು ಕಾರ್ಯಕ್ಕೂ ಎಷ್ಟು ಹಣ ಆಗುತ್ತದೆ. ಇದೊಂದು ಉದಾಹರಣೆ ತೆಗೆದುಕೊಂಡರೆ ಬರಿ ಮನೆಯ ಮೇಂಟೆನೆನ್ಸಿಗೆ ಒಂದು ತಿಂಗಳಿಗೆ 700–800 ರೂಪಾಯಿ ಖರ್ಚಾಗುತ್ತಿದೆ.

Sri G. SIVAPPA.—Has it come to the notice of the Leader of the Opposition that it is only in Mysore that the lowest salary is paid both for the Ministers and Deputy Ministers? Even in respect of other conveniences Mysore's Ministers spend much less than in other States.

Sri B. K. PUTTARAMIAH.—He is helping me. ನಾನು ಹೇಳುತ್ತಾ ಇರುವುದು ಸಂಬಳದ ವಿಷಯ ಅಲ್ಲ ದೇವರು, 1947 ಕ್ಕೆ ಹಿಂದಕ್ಕೆ ಬೇಜವಾಬ್ದಾರಿ ಸರ್ಕಾರ ಎಂದು ಜವಾಬ್ದಾರಿ ಸರ್ಕಾರದ ಮಂತ್ರಿಗಳಾದ ನೀವು ಏನು ಹೇಳುತ್ತಿದ್ದಿರೋ, ಆ ಮಂತ್ರಿಗಳು ಇಲ್ಲದ ಅನುಕೂಲಗಳನ್ನು ಮಾಡಿಕೊಂಡಿದ್ದೀರಿ. ಅವರಿಗೆ 2 ಸಾವಿರ ರೂಪಾಯಿ ಸಂಭಳ ಕೊಡುತ್ತಾ ಇದ್ದರು. ಆವರಿಗೂ ಕೊಡಬಾರದಾಗಿತ್ತು. ಈಗ ಸ್ವಂತಕ್ಕೆ ನೀವು ಉಪಯೋಗಿಸಿದಂಥ 20–30 ಸಾವಿರ ರೂಪಾಯಿಯ ಕಾರನ್ನು ಮೂರು ವರ್ಷದ ನಂತರ 2 ಸಾವಿರ ರೂಪಾಯಿಗೆ ಹರಾಜು ಹಾಕುವುದು ಮಂತ್ರಿಗಳು ಹೊಸದಾಗಿ ತೆಗೆದ ಕಾರೊಂದನ್ನು 4 ಸಾವಿರ ರೂಪಾಯಿಗೆ ಹರಾಜು ಹಾಕಿದ್ದು ನಿಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ಶಿವಪ್ಪ.—ಹಿಂದೆ ರೆಡ್ಡಿಯವರು ಉಪಯೋಗಿಸುತ್ತಿದ್ದ ಕಾರನ್ನು ಎಷ್ಟಕ್ಕೆ ತೆಗೆದುಕೊಂಡಿದ್ದರೋ ಅಷ್ಟಕ್ಕೇ ಮಾರಿದ್ದಾರೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನೀವು ಹೇಳಿದ್ದರಲ್ಲಿ ನಮಗೆ ನಂಬಿಕೆ ಕಡಿಮೆ. ಇದನ್ನು ಯಾರಾದರೂ ನಂಬುವುದಕ್ಕಾಗುತ್ತದೆಯೇ ? ಮಾತಿಗೂ ಬೆಲೆ ಬೇಡವೇ? ಸ್ವಾಮಿ !

ಅಧ್ಯಕ್ಷರು.—ಏತಕ್ಕೆ ಇದು ಎಲ್ಲಾ? ಅವರು ಹೇಳುವಾಗ ಮಾನ್ಯ ಸದಸ್ಯರು ಡಿಸ್ಟರ್ಬ್ ಮಾಡುತ್ತಾ ಇದ್ದಾರೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅವರು ಡಿಸ್ಟರ್ಬ್ ಮಾಡುತ್ತಾ ಇಲ್ಲ. He is helping me. I thank him. ಹೊಸ ಕಾರು ತರಿಸಿ ಆದರಲ್ಲಿ ಕೂತುಕೊಳ್ಳುವುದಕ್ಕೆ ಇಷ್ಟ ಬರದಿದ್ದರೆ, ಅದು ಅಸಹ್ಯಕರವಾಗಿ ಕಂಡು ಬಂದರೆ ಜನರಿಗೆ ಕಾರ್ ಪರ್ಮಿಟ್ ಸಿಗಲು ಕಷ್ಟವಾಗಿರುವ ಕಾಲದಲ್ಲಿ ಅದನ್ನು ಕೊಟ್ಟು ಲಾಭ ಪಡೆದಿರಬಹುದು.

Sri F. X. DENNIS PINTO.—Is the Hon'ble Member aware that in Kerala the P. S. P. Ministers have not foregone any of the amenities.

Sri B. K. PUTTARAMAIYA.—It is not a P. S. P. party Government that is functioning there. P.S.P Ministers may be there. But the P.S.P. party is not in majority. They cannot help.

ಅಲ್ಲಿ ನಾವು ಏನು ಮಾಡಬಹುದು ಸ್ವತಂತ್ರವಾಗಿ ನಡೆಯುವುದಕ್ಕೆ. ಕೇರಳ ಸರ್ಕಾರದಲ್ಲಿ ಪಿ. ಎಸ್. ಪಿ. ಯವರಿಗೆ ಅವಕಾಶವಿದೆಯೇ? ಒಳಗೊಳಗೇ ಪಿ. ಎಸ್. ಪಿ. ಚೀಫ್‌ಮಿನಿಸ್ಟರಿಗೆ ಹಿಂಸೆ ಕೊಡುತ್ತಿದ್ದೀರ. ಪಿ. ಎಸ್. ಪಿ. ಯವರು ಅಲ್ಲಿ ಜನಗಳಿಗೆ ಒಳ್ಳೆಯದು ಮಾಡಿ ಎಲ್ಲಿ ಆ ಜನ ಪಿ. ಎಸ್. ಪಿ. ಕಡೆ ಹೋಗಿಬಿಡುತ್ತಾರೋ ಎಂಬ ಭಯದಿಂದ ಆ ಸರ್ಕಾರವನ್ನು ಒಡೆಯುವುದಕ್ಕೆ ಒಳಗೊಳಗೇ ಹಿಂಸೆ ಕೊಡುವುದು ಶುರುವಾಗಿರುವುದು ನಿಮಗೆ ಗೊತ್ತಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಮೈಸೂರಿನಲ್ಲಿ ಕೂಡ ಕಾಂಗ್ರೆಸ್ಸಿನಲ್ಲಿ ಪಿತೂರಿ ಇದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅಂಥ ಕಷ್ಟದಿಂದ ನಾಲ್ಕು ಜನ ಹೆಚ್ಚು ಮಂತ್ರಿಗಳನ್ನು ತೆಗೆದು ಕೊಂಡರು ನಾನು ವೈಯುಕ್ತಿಕವಾಗಿ ಯಾರ ಮೇಲೆ ಏನನ್ನು ಹೇಳುತ್ತಾ ಇಲ್ಲ. ನಮ್ಮ ದೇಶದ ಆಸ್ತಿ ಆಧಾರಮಾಡಿ, ಸಾಲಮಾಡಿ, ಆ ಹಣದಿಂದ ನಾಲ್ಕು ಜನ ಮಂತ್ರಿಗಳಿಗೆ ಸಂಬಳ ಸಾರಿಗೆ ಕೊಡುವುದು ಯಾವ ನ್ಯಾಯ?

ಜನರಲ್ ಅಡ್ಮಿನಿಸ್ಟ್ರೇಶನ್ ಬಾಬಿನಲ್ಲಿ ಹಣ ಒದಗಿಸಿರುವುದು 20 ಡಿಪಾರ್ಟಮೆಂಟಿಗೆ; ಅಂದರೆ ಒಬ್ಬೊಬ್ಬ ಮಂತ್ರಿಗೆ ಒಂದೊಂದು ಡಿಪಾರ್ಟ್‌ಮೆಂಟ್ ಎಂದಾಯಿತು. ಒಬ್ಬೊಬ್ಬ ಮಂತ್ರಿಕೆಳಗೆ ಒಬ್ಬೊಬ್ಬ ಹೆಡ್ ಆಫ್ ದಿ ಡಿಪಾರ್ಟಮೆಂಟ್ ಮತ್ತು 3–4 ಡಿವಿಜನ್ ಕಮಿಶನರುಗಳು; ಇವರಿಗೆ ಎಷ್ಟು ಖರ್ಚಾಗುತ್ತಾ ಇದೆ. ನೀವು ಪಾಲಿಸಿ ಹಾಕಿ ಬಾಕಿ ಕೆಲಸವನ್ನು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟುಗಳಿಗೆ ಬಿಟ್ಟು ಬಿಡಬೇಕು. ಅದ್ದರಿಂದ 6–7 ಮಂತ್ರಿಗಳನ್ನು ಮಾತ್ರ ಉಳಿಸಿಕೊಂಡು ಉಳಿದವರನ್ನು ತೆಗೆದುಹಾಕಿ ಬಿಡಿ. ನಿಮ್ಮಲ್ಲಿಯೇ ಈ ಮಂತ್ರಿ ಮಂಡಲವನ್ನು ವಿಸ್ತರಿಸಿರುವುದರಿಂದ ಎಷ್ಟು ಜನಕ್ಕೆ ಮನಸ್ಸಿಗೆ ನೋವಾಗಿದೆ ಎನ್ನುವುದನ್ನು ಹೇಳಿ. ಅರ್ಥ ಸಚಿವರಾದ ಮರಿಯಪ್ಪನವರು ಆರೋಗ್ಯ ಸ್ಥಿತಿ ಇಲ್ಲದಿದ್ದಾಗ್ಯೂ, ಹಣಕಾಸಿನ ಪೋರ್ಟ್‌ಫೋಲಿಯೋ ಜೊತೆಗೆ ಸಿರಿಕಲ್‌ಚರ್ ಖಾತೆಯನ್ನು ಇಟ್ಟುಕೊಂಡಿದ್ದರೂ. ಈಗ ಅವರಿಂದ ಒಂದು ಖಾತೆ ತೆಗೆದು ಹಾಕಿರುವುದರಿಂದ ಅವರು ಇನ್‌ಎಫಿಶಿಯಂಟ್, ಆದ್ದರಿಂದ ಹಾಗೆ ತೆಗೆದು ಹಾಕಿದ್ದಾರೆಂದು ತಿಳಿದುಕೊಳ್ಳೋಣವೇ ಹೀಗೆಯೇ ಇನ್ನೊಬ್ಬ ಮಂತ್ರಿಗಳಿಂದ ಅವರಿಗಿದ್ದ ಪೋರ್ಟ್‌ಫೋಲಿಯೋ ತೆಗೆದುಕೊಂಡು ಮತ್ತೊಬ್ಬ ಮಂತ್ರಿಗಳಿಗೆ ಕೊಟ್ಟಿರುವುದರಿಂದ ಅವರೂ ಇನ್‌ಎಫಿಶಿಯೆಂಟ್ ಎಂದು ಹಾಗೆ ತೆಗೆದು ಹಾಕಿದಿರಿ ಎಂದು ಭಾವಿಸೋಣವೇ? ಅಥವ ಕೆಲಸ ಇಲ್ಲದೆ ಇರುವವರಿಗೆ ಕೆಲಸ ಕೊಡೋಣವೆಂದು ಹೀಗೆ ಒಬ್ಬೊಬ್ಬರಿಂದಲೂ ಕೆಲವು ಪೋರ್ಟ್‌ಫೋಲಿಯೋ ತೆಗೆದು ಕೊಂಡಿರುತ್ತೀರ. ನಿಮ್ಮಲ್ಲಿ ಅನೇಕರಲ್ಲಿ ಘರ್ಷಣೆ ತಂದೊಡ್ಡುತ್ತಿದ್ದೀರೆಂದು ತಿಳಿದುಕೊಳ್ಳಬಾರದು. ಆತ್ಮಸಾಕ್ಷಿಯಾಗಿ ನೀವೇ ಹೇಳಿರಿ ಈ ಪೋರ್ಟ್‌ಫೋಲಿಯೊಗಳನ್ನು ಒಬ್ಬರಿಂದ ತೆಗೆದು ಇನ್ನೊಬ್ಬರಿಗೆ ಕೊಟ್ಟಿರುವುದರಿಂದ, ನಿಮ್ಮಲ್ಲಿಯೇ ಕೆಲವು ಮಂತ್ರಿಗಳ ಮನಸ್ಸಿಗೆ ನೋವಾಗಿ, ಕೆಲಸ ಹಿಂದು ಬೀಳಲಿಕ್ಕೆ ಕಾರಣವಾಗಿದೆ. ಇದರಿಂದ ಕೆಲಸ ಮುಂದುವರಿಸುವುದಕ್ಕಾಗುವುದಿಲ್ಲ. ಈಗ

ಮಾಡಿದ ಮಂತ್ರಿಮಂಡಲದ ವಿಸ್ತೀರ್ಣದಿಂದ ನಾಲ್ಕು ಜನ ಸುಮ್ಮನೆ ಆದರು. ನಿಮ್ಮಲ್ಲಿ ಇನ್ನೂ ಕೆಲವರನ್ನೂ ತೃಪ್ತಿಪಡಿಸಲು ಸಾಲ ಮಾಡಿ ಅವರನ್ನು ಮಂತ್ರಿಗಳನ್ನಾಗಿ ಮಾಡುತ್ತೀರಾ? ಸಾಲ ಮಾಡಲು ನಮ್ಮಲ್ಲಿ ಬಂಡವಾಳವಿಲ್ಲ. ಹೀಗೆ ನಮ್ಮಲ್ಲಿ ಬಂಡವಾಳವಿಲ್ಲದೆ ಇರುವಾಗ ಇನ್ನೊಂದು ಭಾರಿ ಗುಂಪು ಎದ್ದಿದೆ ಆ ಗುಂಪನ್ನು ಸಮಾಧಾನ ಪಡಿಸಲು ಅವರಲ್ಲಿಯೂ ನಾಲ್ಕು ಜನಗಳನ್ನು ಮಂತ್ರಿಗಳಾಗಿ ಪುನಃ ನೇಮಿಸಿಕೊಳ್ಳುತ್ತೀರ? ಇನ್ನೊಂದು 25–30 ಜನರನ್ನು ನೇಮಿಸಿಕೊಂಡು ಒಂದೇಸಾರಿ 50 ಮಿನಿಸ್ಟರುಗಳನ್ನು ಮಾಡಿ ಎಲ್ಲಾ ಹೆಡ್ಸ್ ಆಫ್ ಡಿಪಾರ್ಟ್‌ಮೆಂಟುಗಳನ್ನು ತೆಗೆದು ಹಾಕಿಬಿಡಿ. ಅವರ ಬದಲು ನಿಮ್ಮವರನ್ನೇ ನೇಮಿಸಿ ಬಿಡಿ. ಹೀಗೆ ತಮ್ಮ ಭದ್ರತೆಗೋಸ್ಕರ, ಮಂತ್ರಿಮಂಡಲವನ್ನು ವಿಸ್ತರಿಸಿಕೊಂಡು, ಸಾಲ ಮಾಡಿದ ಹಣವನ್ನು ಹುಚ್ಚಾಪಟ್ಟೆ ಖರ್ಚು ಮಾಡುತ್ತಿರುವುದು ನಿಮಗೆ ಕೀರ್ತಿತರತಕ್ಕಂಥದಲ್ಲ ದೇಶದಲ್ಲಿ ಸಾಲ ಏರುತ್ತಾ ಇದೆ. 152 ಕೋಟಿ ರೂಪಾಯಿ ಸಾಲ ಇಟ್ಟುಕೊಂಡು, ಒಂದು ಕಾಸು ರಿಜರ್ವ್ ಫಂಡೂ ಇಲ್ಲದೆ ಇರುವುದನ್ನು ನೋಡಿದರೆ, ಹಳ್ಳಿಗಳ ಕಡೆಯ ಒಂದು ಗಾದೆ ಜ್ಞಾಪಕಕ್ಕೆ ಬರುತ್ತದೆ ಅದೇನೆಂದರೆ ಸಾಯುವವನ ಹತ್ತಿರ ಬೆಲ್ಲ ತೆಂಗಿನಕಾಯಿಗೂ ಒಂದು ಬಿಲ್ಲೆ ಕಾಸು ಇರಲಿಲ್ಲವಂತೆ. ನಿಮ್ಮ ಹಣಕಾಸಿನ ಪರಿಸ್ಥಿತಿ ಹಾಗಿದೆ.

ಶ್ರೀ ಟಿ. ಮರಿಯಪ್ಪ.—ಅಭಿವೃದ್ಧಿ ಯೋಜನೆ ಭದ್ರತೆಯ ಬಗ್ಗೆ ಯಾವ ಭಯವನ್ನು ಇಟ್ಟು ಕೊಳ್ಳಬೇಡಿ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಆಸ್ತಿ ಇದೆ, ಸಾಲ ಬೇಕಾದಷ್ಟು ಮಾಡಿ. ಆದರೆ ಇವತ್ತು ಕೋಟಿಗಟ್ಟಲೆ ಉತ್ಪತ್ತಿ ಇಲ್ಲದೆ ತೋರಿಸಿ ? ದೇಶ ಉಳಿಯುವುದು ಹೇಗೆ ?

ಶ್ರೀ ಜಿ. ಶಿವಪ್ಪ.—ಸರ್ಕಾರ ಸಾಯುವುದಿಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ,—ಸಾಯುವ ಮಾತಿಗೆ ಏಕೆ ಎಳೆದುಕೊಂಡು ಹೋಗುತ್ತಿದ್ದೀರಿ?

ಅಧ್ಯಕ್ಷರು:—ಮಾನ್ಯ ಸದಸ್ಯರಾದ ಶ್ರೀ ಶಿವಪ್ಪನವರು ತಮ್ಮ ಜಾಗಕ್ಕೆ ಬರಬೇಕು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ದೇಶದ ಹಣಕಾಸಿನ ಪರಿಸ್ಥಿತಿ ಹೀಗಿರುವಾಗ, ಹೊಸದಾಗಿ ಮಂತ್ರಿಗಳನ್ನು ತೆಗೆದುಕೊಳ್ಳುತ್ತೀರಾ ? ಹಿಂದೆ ಬೇಜವಾಬ್ದಾರಿ ಸರ್ಕಾರದ ಮಂತ್ರಿಗಳು ಫಸ್ಟ್‌ಡಿವಿಜನ್ ಕ್ಲಾರ್ಕುಗಳನ್ನು ತಮ್ಮ ಪರ್ಸನಲ್ ಅಸಿಸ್ಟೆಂಟುಗಳಾಗಿ ಇಟ್ಟುಕೊಂಡಿರುತ್ತಿದ್ದರು. ಆಗ ಅವರಿಗೆ 60–70 ರೂಪಾಯಿ ಸಂಬಳವಿರುತ್ತಿತ್ತು. ಇವತ್ತು ಡೆಪ್ಯುಟಿಕಮಿಶನರ ದರ್ಜೆಯವರೂ, ಸೀನಿಯರ್ ಅಸಿಸ್ಟೆಂಟ್ ಕಮಿಶನರೂ ಪರ್ಸನಲ್ ಅಸಿಸ್ಟೆಂಟ್‌ರಾಗಿದ್ದಾರೆ, ಅಮಲ್ದಾರರುಗಳಂತೂ ಲೆಕ್ಕವಿಲ್ಲವೇ ಇಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅವರಿಗೆ ಅಡ್ಮಿನಿಸ್ಟ್ರೇಶನ್ ಗೊತ್ತಿಲ್ಲ. ಅವರಿದ್ದರೆ ಸಹಾಯ ಮಾಡುತ್ತಾರೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಇನ್ನೂ ಮುಂದಕ್ಕೆ ಹೋಗುತ್ತೇನೆ. ಅದು ಇನ್ನೂ ನಾಚಿಕೆಗೇಡಿನ ವಿಷಯವೆಂದು ಹೇಳಬೇಕಾಗಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದಂಥ ಜನ ನೀವು, ಅದು ಇಲ್ಲವೆಂದು ಹೇಳುವುದಿಲ್ಲ, ಆದರೆ ಇವತ್ತು ನಿಮ್ಮ ಮನೆ ಬಾಗಿಲುಗಳ ಮುಂದೆ ಪೋಲೀಸರನ್ನು ಹಾಕಿಕೊಂಡಿದ್ದೀರಿ. ಬೇಜವಾಬ್ದಾರಿ ಸರ್ಕಾರವಿದ್ದಾಗಲೂ, ಮಂತ್ರಿಗಳು ಈ ರೀತಿ ಮನೆಗಳ ಮುಂದೆ ಪೋಲೀಸ್ ಆಫೀಸರುಗಳನ್ನು ಹಾಕಿಸಿ ಕೊಂಡಿರಲಿಲ್ಲ. ಅವರುಗಳಿಗೆ ಸೆಕ್ಯೂರಿಟಿ ಆಫೀಸರುಗಳು ಇರಲೇ ಇಲ್ಲ. ಬೇಜವಾಬ್ದಾರಿ ಮಂತ್ರಿಗಳೂ ಮಾಡದಿದ್ದ ಕೆಲಸವನ್ನು ಮಾಡುತ್ತಾ ಇದ್ದೀರ ! ಕಾರಿನಲ್ಲಿ ನೀವು ಹಿಂದೆ ಕೂತುಕೊಂಡು, ಬಂದೂಕು ಇರುವ ಮನುಷ್ಯನನ್ನು ಮುಂದೆ ಕೂಡಿಸಿಕೊಂಡು ಹೋಗುತ್ತಿದ್ದೀರ. ಇದಕ್ಕೆ ಎಷ್ಟು ಹಣ ಕೊಡುತ್ತಾ ಇದ್ದೀರ ? ನಿಮ್ಮ ಜೀವದ ಭದ್ರತೆಗೆ ಸೆಕ್ಯೂರಿಟಿ ಆಫೀಸರನ್ನು ಏಕೆ ಇಟ್ಟು ಕೊಂಡಿದ್ದೀರ ? ಈಗ ದೇಶದಲ್ಲಿ ಅಪಾಯವಾದ ಪರಿಸ್ಥಿತಿ ಏನಿದೆ ? ಜನರಲ್ಲಿ ನಿಮಗೆ ನಂಬಿಕೆ ಇಲ್ಲದಿದ್ದರೆ, ಜನರು ನಿಮ್ಮನ್ನು ನಂಬುವುದಕ್ಕೆ ಆಗುತ್ತದೆಯೇ ? ಜನರಲ್ಲಿ ನಿಮಗೆ ನಂಬಿಕೆ ಇದ್ದಿದ್ದರೆ, ಜವಾಬ್ದಾರಿ ಸರ್ಕಾರದ

(ಶ್ರೀ ಬಿ. ಕೆ. ಪುಟ್ಟರಾಮಯ್ಯ)

ಮಂತ್ರಿಗಳಾದ ನೀವು ಸೆಕ್ಯೂರಿಟಿ ಆಫೀಸರುಗಳನ್ನು ಇಟ್ಟುಕೊಳ್ಳುತ್ತಿದ್ದೀರ ? ಹೀಗೆ ನಿರರ್ಥಕ ವಾದ ಖರ್ಚು ವೆಚ್ಚಗಳನ್ನು ನಿಲ್ಲಿಸಿ, ಅದರಿಂದ ಒಂದೊಂದು ಆಣಿಯನ್ನು ತೆಗೆದು ಇಟ್ಟರೆ, ಅಷ್ಟಷ್ಟು ಸಾಲ ಮಾಡುವುದು ಕಡಿಮೆಯಾಗುತ್ತದಲ್ಲವೇ ಎನ್ನುವುದನ್ನು ನೀವೇ ಯೋಚನೆ ಮಾಡಿ. ಈಗ ಜವಾಬ್ದಾರಿ ಸರ್ಕಾರದಲ್ಲಿ ಒಬ್ಬೊಬ್ಬ ಮಂತ್ರಿಗೆ ಒಬ್ಬೊಬ್ಬ ಸೆಕ್ಯೂರಿಟಿ ಆಫೀಸರು ಸಾಲುವುದಿಲ್ಲ, ಏಕೆಂದರೆ ಶಿಫ್ಟ್ ಇರುವುದರಿಂದ, ದಿನಕ್ಕೆ ಮೂರು ಜನ ಬದಲಾವಣೆಯಾಗ ಬೇಕು. Once in eight hours, ಅವರನ್ನು ಬದಲಾಯಿಸುವುದರಿಂದ, ಈ ಕಾನ್‌ಸ್ಟೇಬಲ್ಲು ಗಳಿಗಾಗಿ ಎಷ್ಟು ಹಣ ಖರ್ಚಾಗುತ್ತದೆ ? ಮಿನಿಸ್ಟರುಗಳ ಮನೆ ಬಾಗಿಲಿನಲ್ಲಿ ಇವರೇಕೆ ? ನೀವು ದೇಶಕ್ಕೋಸ್ಕರವಾಗಿ ದುಡಿಯುವುದಕ್ಕೆ ಮತ್ತು ಜನಗಳಿಗೆ ಒಳ್ಳೆಯದು ಮಾಡುವುದಕ್ಕೆ ಬಂದಿ ದ್ದೀರೋ ಅಥವ ಸ್ವಾರ್ಥ ಸಾಧನೆ ಮಾಡಿಕೊಳ್ಳುವುದಕ್ಕೆ ಬಂದು ಅಲ್ಲಿ ಕೂತಿದ್ದೀರ ? ನಿಮ್ಮ ಜೀವನವನ್ನು ಹೊರೆಯಲು ಬಂದಿದ್ದೀರ ? ಹೊರಗಡೆ ನಿಮ್ಮ ಜೀವಕ್ಕೆ ಅಪಾಯವಿದೆಯೆಂದು ಪೋಲೀಸ್ ಸೆಕ್ಯೂರಿಟಿ ಇಟ್ಟುಕೊಂಡು ಇಲ್ಲಿಗೆ ಬಂದಿದ್ದೀರೆ ವಿನಾ ದೇಶಕ್ಕೋಸ್ಕರ ದುಡಿಯುವು ದಕ್ಕೆ ಬಂದಿದ್ದೀರೆಂದು ಹೇಳುವುದಕ್ಕೆ ಸಾಧ್ಯವಿಲ್ಲ.

ನೀವು ಟೂರ್ ಮಾಡುವಾಗ ಒಂದೇ ದಿವಸದಲ್ಲಿ ಮೂರು ಡಿಸ್ಟ್ರಿಕ್ಟ್ ಟೂರ್ ಮಾಡುತ್ತೀರ. ಅಧಿಕಾರಿಗಳು ಟೂರ್ ಮಾಡಿದರೆ, ಅವರಿಗೆ ಸ್ವಂತ ಕಾರು ಸ್ವಂತ ಡ್ರೈವರು ಎಲ್ಲಾ ಇರುತ್ತದೆ. ಆದರೆ ನಿಮಗೆ ಗವರ್ನ್‌ಮೆಂಟ್ ಡ್ರೈವರ್, ಗವರ್ನ್‌ಮೆಂಟ್ ಕಾರ್, ಗವರ್ನ್‌ಮೆಂಟ್ ಖರ್ಚಿ ನಲ್ಲಿ ರಿಪೇರಿ, ರಿಪೇರಿ ನಿಮ್ಮ ಖರ್ಚಿನಲ್ಲಿ ಎಂದಿದ್ದರೆ, ನೀವು ಕಾರಿನಲ್ಲಿ ಸಹಿತ ಕೂತು ಕೊಳ್ಳುತ್ತಿರಲಿಲ್ಲ.

ಸ್ವಾಮಿ, ನಾನು ಹೇಳುವುದು ಇಷ್ಟೇ: ಮಂತ್ರಿಗಳಿಗೆ ಒದಗಿಸತಕ್ಕ ಪದಾರ್ಥಗಳಲ್ಲಿ ಕಾರ್ ಕೊಡುವುದು ಪರಿಮಿತಿಗೆ ಸೇರಿದೆ. ಮಂತ್ರಿಗಳಿಗೆ ಕರ್ಟನ್ ಬಟ್ಟೆ, ಟೇಬಲ್ ಕ್ಲಾಥ್ ಟಬ್ ಬಾಥ್, ಇತರ ಪಾತ್ರೆಗಳು, ಕಟ್ಲರೀ ಮುಂತಾದ ಪದಾರ್ಥಗಳನ್ನು ಒದಗಿಸುವುದು ಅವರ ಪರಿಮಿತಿಗೆ ಹೇಗೆ ಸೇರುತ್ತದೆ ? ಆದ್ದರಿಂದ ಇದು ಸರಿಯಲ್ಲ. ಕೇವಲ ಕಾರ್ ಒಂದನ್ನು ಕೊಡುವುದು ಮತ್ತು ಅದರ ಮೆಂಟೆನೆನ್ಸ್ ಅಷ್ಟುಮಾತ್ರ ಇರತಕ್ಕದ್ದು. ಮಂತ್ರಿಗಳು ತಮ್ಮ ಪ್ರೈವೇಟ್ ಕೆಲಸಕ್ಕೋಸ್ಕರ ಕಾರ್ ಉಪಯೋಗಿಸ ತಕ್ಕದ್ದಲ್ಲ. ದೇಶದ ಹಿತದೃಷ್ಟಿಯಿಂದ ಮಾಡತಕ್ಕ ಕೆಲಸಕ್ಕಾಗಿ ಕಾರ್ ಅವರಿಗೆ ಕೊಟ್ಟಿರುತ್ತದೆ. ಸರಕಾರಿ ಕೆಲಸಕ್ಕೆ ಕಾರ್ ಉಪಯೋಗಿಸುವಾಗ್ಗೆ ಬೇಕಾಗುವ ಪೆಟ್ರೋಲಿಕ್ಕಿಂತ ಇವರ ಖಾಸಗೀ ಕೆಲಸಕ್ಕೆ ಹೆಚ್ಚು ಪೆಟ್ರೋಲ್ ಖರ್ಚು ಮಾಡುತ್ತಾರೆ ಆದಕಾರಣ ಕಾರ್ ಕೊಂಡುಕೊಳ್ಳುವುದಕ್ಕೆ ಸಾಲ ಬೇಕಾದರೆ ಕೊಡಬಹುದು. ಯಾಕೆಂದರೆ ಇವರಿಗೆ ಕಾರು ಕೊಂಡುಕೊಳ್ಳಲು ಶಕ್ತಿ ಸಾಲದು ಸಾಲ ಕೊಡುವದಕ್ಕೂ ಸಹ ಧೈರ್ಯ ಬರಲಾರದು. ಯಾಕೆಂದರೆ ಐದು ವರ್ಷದ ನಂತರ ಏನಾಗುತ್ತದೆಯೋ ಏನೋ. ಆದುದರಿಂದ ಒಬ್ಬ ಮಂತ್ರಿಗೆ ಟೂರ್ ಮಾಡುವುದಕ್ಕೆ ಇಂತಿಷ್ಟು ಗ್ಯಾಲನ್ ಪೆಟ್ರೋಲ್ ಕೊಡಬೇಕೆಂದು ನಿಗದಿ ಮಾಡುವುದು ಒಳ್ಳೆಯದು ಕಾರ್ ಕೆಟ್ಟು ಹೋದರೆ ದುರಸ್ತಿ ಮಾಡುವುದು ಟೈರ್ ಹಾಕಿಸುವುದು ಇದಕ್ಕೆ ಸರಕಾರ ಖರ್ಚು ಮಾಡ ಬೇಕಾಗಿದೆ. ಸುಮಾರು 40 ಅಥವಾ 50 ಗ್ಯಾಲನ್ ಪೆಟ್ರೋಲ್ ಕೊಟ್ಟರೆ ಸಾಕಾಗುವುದು. ಹಿಂದೆ ಬೇಜವಾಬ್ದಾರಿ ಸರಕಾರ ಇರುವಾಗ್ಗೆ ಮಂತ್ರಿಗಳು ಒಂದು ತಿಂಗಳಿನಲ್ಲಿ ಎರಡು ಮೂರು ದಿವಸ ಅಷ್ಟೇ ಟೂರ್ ಮಾಡುತ್ತಿದ್ದರು. ಅದೇ ಹೆಚ್ಚಾಗುತ್ತಿತ್ತು. ಆದರೆ ಈಗ ಮಂತ್ರಿಗಳು ಒಂದು ತಿಂಗಳಿನಲ್ಲಿ 30 ದಿವಸ ಟೂರ್ ಮಾಡುತ್ತಾರೆ 20 ದಿವಸಕ್ಕಿಂತೂ ಕಡಿಮೆಯಾಗುವುದಿಲ್ಲ. ಒಂದು ವೇಳೆ 18 ದಿವಸ ಮಾತ್ರ ಟೂರ್ ಮಾಡಿದರೆ ಅವನು ಮಹಾಪಾಪಿ. ಇನ್ನೊಂದು ವಿಷಯ ಏನೆಂದ್ರೆ ಸರಕಾರಿ ಅಧಿಕಾರಿಗಳು ಹೊರಗಡೆ ಪ್ರವಾಸಕ್ಕೆ ಹೋದಾಗ ಒಂದು ದಿವಸಕ್ಕೆ ಎಷ್ಟು D. A. ಕೊಡಲಾಗುತ್ತದೆಯೋ ಅಷ್ಟನ್ನೇ ಮಂತ್ರಿಗಳೂ ಸಹ ತೆಗೆದುಕೊಳ್ಳಲಿ. ಮಂತ್ರಿಗಳು

T. A. claim ಮಾಡುವುದಕ್ಕೆ ಇವರಿಗೆ ಯಾವ ಹಕ್ಕೂ ಇಲ್ಲ. ಇಂತಿಷ್ಟು ಪೆಟ್ರೋಲ್ ಒಂದು ತಿಂಗಳಿಗೆ ಎಂದು ಗೊತ್ತುಮಾಡಿ ಅಷ್ಟನ್ನು ತೆಗೆದುಕೊಳ್ಳಲಿ. T.A. draw ಮಾಡುವುದನ್ನೂ ತಪ್ಪಿಸಬೇಕು ಎಂದು ಖಡಾ ಖಂಡಿತವಾಗಿ ನಾನು ಹೇಳುತ್ತೇನೆ.

ಇನ್ನೊಂದು ವಿಚಾರ. ನಿಮ್ಮ ಕೈಕೆಳಗಿನ ಅಧಿಕಾರಿಗಳಲ್ಲಿ ಏನೇನು ನಡೆಯುತ್ತಿದೆ ನಿಮಗೆ ಏನು ಗೊತ್ತಿಲ್ಲ. ಸೆಕ್ರೆಟೆರಿಯಟ್‌ನಲ್ಲಿ ಅನೇಕ ಕ್ಲಾರ್ಕ್‌ಗಳಿಗೆ ಕೆಲಸವಿಲ್ಲ. ಈ ಗುಮಾಸ್ತರು ಕೆಲಸ ವಿಲ್ಲದ್ದರಿಂದ ತಮ್ಮ ತಮ್ಮ ಸೀಟಿನಲ್ಲಿ ಇರುವುದಿಲ್ಲ. ಮೇಲಿಂದ ಮೇಲೆ ಕಾಫಿ ಕುಡಿಯುವದಕ್ಕೆ ಹೋಟಲಿಗೆ ಹೋಗುತ್ತಾರೆ. ಸಿಬ್ಬಂದಿಯ ಖರ್ಚು ಮಾತ್ರ ಅಸಾಧ್ಯವಾಗಿದೆ. ಅಧಿಕಾರಿಗಳು ಸಹ ಬರೆದು ಇಟ್ಟದ್ದಕ್ಕೆ ಸಹಿಹಾಕುತ್ತಾರೆ. ಪ್ರತಿಯೊಂದನ್ನು ಗುಮಾಸ್ತರಿಂದಲೇ ಬರೆಸುತ್ತಾರೆ. ಎರಡು ಶಬ್ದ ಬರೆಯುವುದನ್ನು ಸಹ ಟೈಪ್ ಮಾಡಲು ಕಳಿಸುತ್ತಾರೆ. ವಿಪರೀತ ಕಾಲವಿಲಂಬ ಮಾಡುತ್ತಾರೆ. ಶಕ್ತಿ ಇಲ್ಲದೇ ಇರುವಂಥ ಅಧಿಕಾರಿಗಳನ್ನು ನೀವು ಇಟ್ಟುಕೊಂಡಿದ್ದೀರಿ. ಗುಮಾಸ್ತ ಬರೆದದ್ದಕ್ಕೆ ಸಹಿ ಮಾತ್ರ ಹಾಕುತ್ತಾರೆ. ಕೈಕೆಳಗಿನವರಿಂದ ಸರಿಯಾಗಿ ಕೆಲಸ ತೆಗೆದು ಕೊಳ್ಳುವುದಕ್ಕೆ ಆಗುವದಿಲ್ಲ. ಈಗ ನಾಲ್ಕು ಜನ ಮಂತ್ರಿಗಳು ಜಾಸ್ತಿಯಾದರು ಅವರಿಗೆ ಸರಿಯಾದ ಕೋಣೆ ಆಫೀಸು ರೂಮ್ ಆಗಬೇಕು. ಒಬ್ಬರಿಗು ಸೆಕ್ರೆಟರಿ ಕ್ಲಾರ್ಕ್ ಮುಂತಾದ ಸಿಬ್ಬಂದಿ ಒದಗಿಸಬೇಕು ಈ ರೀತಿ ಸಿಬ್ಬಂದ್ದಿ ಜಾಸ್ತಿ ಮಾಡುತ್ತ ಹೋಗುವುದರಿಂದ ಖರ್ಚು ಜಾಸ್ತಿಯಾಗುತ್ತಿದೆ. ಇದಕ್ಕೆ ಹಣ ವಿಲ್ಲದ್ದರಿಂದ ಸಾಲ ಮಾಡಬೇಕಾದ ಪ್ರಮೇಯ ಬಂದಿದೆ. ದಿನ ಬೆಳಗಾದರೆ ಈ ಡೈರೆಕ್ಟರ್, ಆ ಜಾಯಿಂಟ್ ಡೈರಕ್ಟರ್ ಎಂದು ಹೊಸ ಹೊಸ ಅಧಿಕಾರಿಗಳ ನೇಮಕ ನಡೆಯುತ್ತಲೇ ಇದೆ. ಈ ರೀತಿ ಅಧಿಕಾರಿಗಳನ್ನು ಹೆಚ್ಚು ಹೆಚ್ಚಾಗಿ ನೇಮಕ ಮಾಡುತ್ತಿರುವುದು ಇಂಥ ಕಷ್ಟದ ಕಾಲದಲ್ಲಿ ಸಾಲ ಮಾಡಿ ಹಣ ಒದಗಿಸುವ ಕಾಲದಲ್ಲಿ ನಿಮ್ಮ ಆತ್ಮಕ್ಕಾದರೂ ಒಪ್ಪಿಗೆಯಾಗುತ್ತಿದೆಯೇ ? ಇದು ಸಾಧುವಾದುದೇ ಇದು ನ್ಯಾಯವೇ ? ಇಷ್ಟೇ ಅಲ್ಲದೆ ಸೌಜನ್ಯವಿಲ್ಲದ ಅಧಿಕಾರಿಗಳನ್ನು ಇಟ್ಟುಕೊಂಡಿದ್ದೀರಿ.

ಸೌಜನ್ಯ ಎಂದರೇನೆಂಬುದೇ ಅವರಿಗೆ ಗೊತ್ತಿಲ್ಲ. ಅಂಥ ಅಧಿಕಾರಿಗಳೂ ಇದ್ದಾರೆ ಮೊನ್ನೆ ತಾನೆ ನಮ್ಮಲ್ಲಿ ಸೆನ್ಸಸ್ ಲೆಕ್ಕ ನಡೆಯಿತು. ಸರ್ಕಾರದವರೇ ಈ ಸೆನ್ಸಸ್ ವಿಚಾರದ ಅಂಕಿಅಂಶ ಗಳನ್ನು ನಮಗೂ-ಬೇರೆಯವರಿಗೂ-ಪ್ರೆಸ್ಸಿನವರಿಗೂ ಕೊಟ್ಟಿದ್ದಾರೆ. ಆದರೆ ಸಾರ್ವಜನಿಕರಲ್ಲಿ ಪ್ರಜಾಸರ್ಕಾರವಿರುವಾಗಲಾದರೂ ಸೌಜನ್ಯತೆಯಿಂದ ವರ್ತಿಸಿ, ನಡೆಯಲಾರದಂಥವರು ಈಗ ಸೆನ್ಸಸ್ ಸೂಪರಿಂಟೆಂಡೆಂಟರಾಗಿದ್ದಾರೆ. ಇಷ್ಟು ಸೌಜನ್ಯತೆಯಿಂದ ನಡೆಯಲು ಸಾಧ್ಯವಿಲ್ಲದ ಅಧಿಕಾರಿಗಳನ್ನು ಸರ್ಕಾರದವರು ಕೂಡಲೆ ಕೆಲಸದಿಂದ ಕಿತ್ತೊಗೆಯಬೇಕು. ಈಗ ಹಣಕಾಸಿನ ಮಂತ್ರಿಗಳಾಗಿರತಕ್ಕ ಶ್ರೀ ಟಿ. ಮರಿಯಪ್ಪನವರು ಹಿಂದೆ ಇದ್ದ ಸರ್ಕಾರ ಆಡಳಿತ ನಡೆಸುತ್ತಿದ್ದಾಗ ಇವರು ಅಪೋಸಿಷನ್ ಪಾರ್ಟಿಯ ಲೀಡರಾಗಿದ್ದರು. ಲೆಜಿಸ್ಲೇಟಿವ್ ಕೌನ್ಸಿಲ್ ಸಭೆಯಲ್ಲಿ. ಹಿಂದೆ ಈ ಪ್ರೆಸ್‌ಗಳ ವಿಚಾರದಲ್ಲಿ ಆಗಿದ್ದ ಸರ್ಕಾರ ಏನಾದರೂ ಡಿಸ್ಕ್ರಿಮಿನೇಷನ್ ಮಾಡಿದ್ದರೆ ಇವರೇ ಯಾವ ರೀತಿ ಎಷ್ಟು ಕಟುವಾಗಿ ಹಿಂದೆ ಟೀಕೆ ಮಾಡಿದ್ದಾರೆಂಬುದು ಅವರಿಗೆ ಗೊತ್ತಿದೆ. ಆದರೆ ಪ್ರೆಸ್ಸಿನವರಿಗೆ ಪ್ರೆಸ್ ಕಾನ್ಫರೆನ್ಸನ್ನು ಕರೆದಾಗ ಅವರಿಗೆ ಏನು ಪ್ರಶ್ನೆ ಬೇಕಾದರೂ ಕೇಳುವಂಥ ಒಂದು ಹಕ್ಕು ಆ ಪ್ರೆಸ್‌ನವರಿಗಿರುತ್ತದೆ. ಹಾಗೆ ಪ್ರೆಸ್ಸಿನವರಿಗೆ ಅಂಥ ಒಂದು ಅಧಿಕಾರವಿಲ್ಲದೆ ಹೋಗಿದ್ದರೆ ಆಗ ಈ ಪ್ರೆಸ್-ಕಾನ್ಫರೆನ್ಸನ್ನು ಕರೆಯ ಬೇಕಾದ ಅವಶ್ಯಕತೆಯೇ ಇರುತ್ತಿರಲ್ಲಿಲ್ಲ. ಅಂದಮೇಲೆ ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರೆಸ್ಸಿನವರು ಯಾವ ಪ್ರಶ್ನೆ ಯನ್ನಾದರೂ ಕೇಳಬಹುದೆಂದು ಕಾನೂನು ಇರುತ್ತೆ. ಹಾಗೆ ಅವರಿಗೆ ಒಂದು ಹಕ್ಕಿರುವಾಗ ಅವರಲ್ಲಿ ಒಂದು ಪ್ರೆಸ್ಸಿನವರನ್ನು ಆ ಸೆನ್ಸಸ್ ಸೂಪರಿಂಟೆಂಡೆಂಟರು ಪೋಲೀಸ್ ಸೂಪರಿಂಟೆಂ ಡೆಂಟರನ್ನು ಕರೆಸಿ ಹೊರಗೆ ಹಾಕಲಾಗುತ್ತೆಂದು ಹೇಳಬೇಕಾಗಿದ್ದರೆ ನಮ್ಮ ಆಡಳಿತ ಎಷ್ಟರಮಟ್ಟಿ ಗಿದೆ ಸರ್ಕಾರದವರು ಈ ವಿಚಾರವನ್ನು ತಕ್ಷಣವೇ ವಿಚಾರಣೆಮಾಡಬೇಕು. ಜನತಾ ಸರ್ಕಾರ ವಿರು ವಾಗ ಈ ರೀತಿ ನಡೆಯುವುದಾದರೆ ಇದನ್ನೆಂಥ ಜನತಾ ಸರ್ಕಾರವೋ ನಾನು ಕಾಣೆ, ಈಗಲಾದರೂ

(ಶ್ರೀ ಬಿ. ಕೆ. ಪುಟ್ಟರಾಮಯ್ಯ)

ಸರ್ಕಾರದವರು ಈ ವಿಷಯವನ್ನು ತಕ್ಷಣ ವಿಚಾರ ಮಾಡಬೇಕೆಂದು ಹೇಳುತ್ತೇನೆ. ಇದು ಅಂಥ ಸಾಧಾರಣವಾದ ವಿಚಾರವಲ್ಲ. ಸರ್ಕಾರದವರು ಇದಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಆ ಲಂಚನಿರೋಧ ಶಾಖೆ ಬೇರೆ ಸರ್ಕಾರದವರ ಕೈಲಿದೆ. ಹೀಗೆ ಈ ಇಲಾಖೆ ಎಲ್ಲಿಯವರೆಗೆ ಸರ್ಕಾರದವರ ಕೈಲಿರುತ್ತದೋ ಅಲ್ಲಿಯ ತನಕ ಸಾರ್ವಜನಿಕರು ನ್ಯಾಯವನ್ನು ಈ ಇಲಾಖೆಯಿಂದ ನಿರೀಕ್ಷಿಸಲು ಸಾಧ್ಯವಿಲ್ಲ; ನಾವು ನೀರಿಕ್ಷಿಸುವುದೂ ಕೂಡ ಸಾಧುವಲ್ಲ. ಪಾರ್ಟಿ ಸರ್ಕಾರಗಳು ರಾಜ್ಯಭಾರ ನಡೆಸುತ್ತಿರುವ ಕಾಲದಲ್ಲಿ ಮಂತ್ರಿಗಳೊಂದುವೇಳೆ ಸರಿಯಾಗಿದ್ದರೂ ಅವರ ಹಿಂಬಾಲಕರು ಮಂತ್ರಿಗಳನ್ನು ಹಿಂದಕ್ಕೂ–ಮುಂದಕ್ಕೂ ಎಳೆದಾಡಿ ಅವರ ಕೈಯಿಂದ ಅನೇಕ ಅನ್ಯಾಯಗಳನ್ನು ಮಾಡಿಸುತ್ತಾರೆ. ಅಂಥ ನಿದರ್ಶನಗಳು ಈಗ ನನ್ನಲ್ಲಿ ಅನೇಕ ಇವೆ ಆದುದರಿಂದ ಈ ಆಂಟಿಕರಪ್ಷನ್ ಇಲಾಖೆಯನ್ನು P. S. C. ಮತ್ತು ಹೈಕೋರ್ಟುಗಳು ಇರುವಂತೆ ಒಂದು ಸ್ಟ್ಯಾಟುಟರಿ ಬಾಡಿಯನ್ನಾಗಿ ಇಡಬೇಕೆಂದು ಹೇಳುತ್ತೇನೆ. ಸರ್ಕಾರದವರು ಇಂಥ ಒಂದು ಇಲಾಖೆಯನ್ನು ತಮ್ಮ ಅಧಿಕಾರದಲ್ಲಿಟ್ಟುಕೊಳ್ಳುವುದು ದೇಶದ ಹಿತ ದೃಷ್ಟಿಯಿಂದ ಒಳ್ಳೆಯದಲ್ಲ. ಇದನ್ನು ಅವರು ಅವರ ಅಧಿಕಾರ ವ್ಯಾಪ್ತಿಯಿಂದ ತಪ್ಪಿಸುವುದು ಅತ್ಯವಶ್ಯಕವೆಂದು ನಾನು ಸಲಹೆ ಮಾಡುತ್ತೇನೆ. ಈ ಸಲಹೆಯನ್ನು ಸರ್ಕಾರದವರು ಸಹ ಒಪ್ಪುತ್ತಾರೆಂದು ಭಾವಿಸಿದ್ದೇನೆ.

ಇನ್ನು ರೆವಿನ್ಯೂ ಇಲಾಖೆಯ ವಿಚಾರ ತೆಗೆದುಕೊಂಡರೆ–4 ಜನ ಡಿವಿಜನಲ್ ಕಮಿಷನರುಗಳಿದ್ದಾರೆ. ನಮ್ಮ ಸರಕಾರದಲ್ಲಿ ಹುದ್ದೆಗಾಗಿ ಸ್ಥಾನಗಳಿವೆಯೊ ಅಥವಾ ಸ್ಥಾನಗಳಿಗಾಗಿ ಹುದ್ದೆಗಳನ್ನು ನೇಮಕಮಾಡುತ್ತಾರೋ ತಿಳಿಯದಾಗಿದೆ. ಈ ಡಿವಿಜನಲ್ ಕಮೀಷನರ್‌ಗಳ ಹುದ್ದೆಗಳಿಂದ ಸರ್ಕಾರದ ಕೆಲಸ ಮತ್ತಿಷ್ಟು ನಿಧಾನವಾಗುವುದರ ಜೊತೆಗೆ ಸರ್ಕಾರಕ್ಕೆ ಅಪಾರ ಹಣ ಬೇರೆ ನಷ್ಟವಾಗುತ್ತಿದೆ. ನಾವು ಈ ಹಿಂದೆಯೇ ಸರ್ಕಾರದವರಿಗೆ ಅಸಿಸ್ಟೆಂಟ್ ಕಮಿಷನರ ಹುದ್ದೆಗಳನ್ನು ಮತ್ತು ಡಿವಿಜನಲ್ ಕಮಿಷನರ ಹುದ್ದೆಗಳನ್ನು ರದ್ದುಮಾಡಿ ತಹಶೀಲ್‌ದಾರರಿಗೂ ಮತ್ತು ಡೆಪ್ಯುಟಿ ಕಮಿಷನರುಗಳಿಗೂ ಇನಷ್ಟು ಅಧಿಕಾರಕೊಡಿ. ಇದರಿಂದ ಕೆಲಸವೂ ಬೇಗ ಆಗುತ್ತೆ ಸರ್ಕಾರಕ್ಕೆ ಹಣವೂ ಉಳಿಯುತ್ತೆಂದು ಸಲಹೆಮಾಡಿದ್ದೆವು. ಯಾವತ್ತು ಮಂತ್ರಿಗಳಿಗೆ ಈ ಜಿಲ್ಲಾಧಿಗಳ ಹಾಗೂ ತಹಶೀಲ್‌ದಾರರ ಮೇಲೆ ಅಧಿಕಾರವಿದ್ದೇ ಇರುತ್ತೆ. ಹೀಗೆ ಮಾಡಿದ್ದರೆ ನಮ್ಮ ಸರ್ಕಾರ ಸಾಲ ಎತ್ತಬೇಕಾದ ಆಗತ್ಯವೇ ಇರುತ್ತಿರಲಿಲ್ಲ. ಇದರಿಂದ ಸಾಲ ಎತ್ತುವುದು ನಿಂತೂ–ನಮಗೆ ಇನ್ನು ಹಣ ಉಳಿತಾಯ ವಾಗುತ್ತಿತ್ತು. ಆದರೆ ನಾವೇನೂ ಸಲಹೆಮಾಡಿದರೂ ಅದು ನಮ್ಮ ಸರ್ಕಾರದವರಿಗೆ ರುಚಿಸುತ್ತಿಲ್ಲ. ಅದರಿಂದಲೇ ಈ ಸರ್ಕಾರದಲ್ಲಿ ದಬ್ಬಾಳಿಕೆ ಖರ್ಚುವೆಚ್ಚಗಳು ಅನಗತ್ಯವಾದ ವೆಚ್ಚಗಳು ಹೆಚ್ಚಿ ಮಹಮ್ಮದ್-ಬಿನ್-ತೊಗಲಕ್‌ನ ಆಡಳಿತದಲ್ಲಿದಂತೆ ಭಂಡಾರ ವೆಲ್ಲ ಬರಿದಾಗುತ್ತಿದೆ. ಸರ್ಕಾರದವರು ಕೂಡಲೇ ಇಂಥ ಅನವಶ್ಯಕ ಹುದ್ದೆಗಳನ್ನು ಕೂಡಲೇ ರದ್ದುಮಾಡಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಜಿ. ವೆಂಕಟೇಗೌಡ (ಪಾಳ್ಯಂ).—ಸರ್ಕಾರದ ವೆಚ್ಚದಲ್ಲಿ ಮಿತ ವ್ಯಯವನ್ನು ಸೂಚಿಸಲು ಸರ್ಕಾರದವರು ಶ್ರೀ ಎ. ಜಿ. ರಾಮಚಂದ್ರರಾಯರ ಕಮಿಟಿ ನೇಮಕ ಮಾಡಿದ್ದಾರೆ.......

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಹೌದು ಮಾಡಿದ್ದಾರೆ. ಹಾಗೆ ಆ ಕಮಿಟಿ ನೇಮಕ ಮಾಡಿರತಕ್ಕ ಸಂದರ್ಭ ನನಗೂ ಗೊತ್ತಿದೆ. ಅದರ ಒಳಮರ್ಮ ವೇನೆಂಬುದು ಸರ್ಕಾರದವರಿಗೂ ಗೊತ್ತಿದೆ. ಆ ಕಮಿಟಿ ನೇಮಕದಿಂದ ಏನೂ ಆಗುವುದಿಲ್ಲ ಎಂಬ ವಿಚಾರ ಸರ್ಕಾರದವರಿಗೆ ಎಂದೋ ಗೊತ್ತಾಗಿದೆ. ಕಾರಣ ಅವರ ಪಾಲಸಿಯನ್ನು ಬದಲಾಯಿಸಿಕೊಳ್ಳಲು ಅವರಿಗೆ ಮನಸ್ಸಿಲ್ಲ. ಈಗಾಗಲೇ ನಮ್ಮ ಸರ್ಕಾರದಲ್ಲಿ ಮಿತವ್ಯಯದ ವಿಚಾರದಲ್ಲಿ ಅನೇಕ ಕಮಿಟಿ ಪೋರ್ಟುಗಳಿರುತ್ತವೆ. ಈ ಹಿಂದೆ ಇದ್ದ ಸರ್ಕಾರಗಳು ನೇಮಕ ಮಾಡಿದ್ದ ಅನೇಕ ಕಮಿಟಿಗಳು

ವರದಿಯನ್ನು ಸರ್ಕಾರಕ್ಕೊಪ್ಪಿಸದೆ ಆ ವರದಿಗಳು ಈಗಲೂ ಸರ್ಕಾರದಲ್ಲಿರುತ್ತವೆ. ಈಗ ಸರ್ಕಾರದವರು ಹೊಸದಾಗಿ ಮತ್ತೊಂದು ಕಮಿಟಿ ನೇಮಕ ಮಾಡಿರುವುದು ಅದೊಂದು ಬೇರೆ ಕಾರಣಕ್ಕಾಗಿ. ಹಾಗೆ ಸರ್ಕಾರದವರಿಗೆ ಈ ಮಿತವ್ಯಯದ ವಿಚಾರದಲ್ಲಿ ಮನಸ್ಸಿದ್ದರೆ, ಅಭಿಮಾನವಿದ್ದಿದ್ದರೆ ಅವರಿಗೆ ಬೇಕಾದ ಅಂಕಿ ಅಂಶಗಳೆಲ್ಲ ಅವರಲ್ಲೇ ಇವೆ. ಶ್ರೀ ಮಾರ್ಣ ಮರಿಯಪ್ಪ ನವರಿಗೆ ಈ ದಿವಸ ಬೇರೆ ಒಂದು ಕಮಿಟಿಯವರಿಂದ ಅಂಕೀಅಂಶಗಳನ್ನು ತರಿಸಿಕೊಳ್ಳ ತಕ್ಕ ಅಗತ್ಯವೇನಿಲ್ಲ. ರಾಮಚಂದ್ರರಾವ್ ಕಮಿಟಿಯ ನೇಮಕ ಸರ್ಕಾರಕ್ಕೆ ಹಣ ವೇಸ್ಟಾಗಲು ಒಂದು ಮಾರ್ಗವಾಗಿದೆಯೇ ವಿನಾ ಅದರಿಂದೇನೂ ಸರ್ಕಾರಕ್ಕೆ ಉಪಯೋಗ ವಾಗುವುದಿಲ್ಲ ವೆಂಬುದನ್ನು ಮಂತ್ರಿಗಳೇ ಚೆನ್ನಾಗಿ ಅರಿತಿದ್ದಾರೆ. ಆದರೆ ಯಾರನ್ನೋ ತೃಪ್ತಿ ಪಡಿಸ ಬೇಕಾಗಿತ್ತು, ಅದಕ್ಕಾಗಿ ಆಗ ಆ ಒಂದು ಕಮಿಟಿಯನ್ನು ನೇಮಕ ಮಾಡಿದರು. ಅಷ್ಟೇ ವಿನಾ ಅದರ ಮರ್ಮ ಬೇರೆಯೇನೂ ಇಲ್ಲ. ಇಂಥ ಸಮಿತಿಗಳ ನೇಮಕ ದಿಂದ ಸಾರ್ವಜನಿಕರ ಹಣ ವಿನಾ ವೆಚ್ಚವಾಗುವುದಕ್ಕೊಂದು ದಾರಿಯೇ ವಿನಾ ಇದರಿಂದ ದೇಶಕ್ಕೇನೂ ಒಳ್ಳೆಯದಾಗುವು ದಿಲ್ಲ ವೆಂದು ನಾನು ಖಡಾ ಖಂಡಿತವಾಗಿ ಹೇಳುತ್ತೇನೆ. ಸರ್ಕಾರದವರಿಗೆ ಮಾಡಬೇಕೆಂಬ ಇರಾದೆ ಇದ್ದರೆ ಅವರಲ್ಲೇ ಬೇಕಾದಷ್ಟು ತಜ್ಞರ ಸಮಿತಿ ವರದಿಗಳಿವೆ; ಮಾಡಬಹುದು. ಆದರೆ ಅವರಿಗೆ ಆ ಮನಸ್ಸಿಲ್ಲ. ಯಾರಿಗೋ ಒಂದು ಹುದ್ದೆ ಕೊಡಬೇಕಾಗಿತ್ತು ಅದಕ್ಕೊಂದು ಕಮಿಟಿ ನೇಮಿಸಿದರು. ಆದರೆ ಹಾಗೆ ಹುದ್ದೆಗಳನ್ನು ನೇಮಿಸುವುದರಲ್ಲೂ ಒಂದು ನೀತಿಯಿದೆ. ಸರ್ಕಾರಕ್ಕೂ ಅನುಕೂಲವಾಗಬೇಕು, ದೇಶಕ್ಕೂ ಒಳ್ಳೆಯದಾಗಬೇಕು. ಆ ರೀತಿ ಹುದ್ದೆಗಳನ್ನು ಸರ್ಕಾರದವರು ನೇಮಕಮಾಡಲಿ. ಅದಕ್ಕೆ ನಾನು ಬೇಡವೆನ್ನುವುದಿಲ್ಲ ಆದರೆ ಹೀಗೆಲ್ಲಾ ಅವರು ದೇಶದ ಹಣವನ್ನು ಪೋಲುಮಾಡಬಾರದು. ಹಳ್ಳಿಗಳಕಡೆ ಜನ ಒಂದುಮಾತು ಹೇಳುತ್ತಾರೆ. ''ತಿಂದ ಅನ್ನ ಜೀರ್ಣವಾಗಬೇಕು'' ಎಂತ ಯಾರು ಸರ್ಕಾರದಿಂದ ಸಂಬಳ ತೆಗೆದುಕೊಂಡು ಜೀವನ ಮಾಡುತ್ತಾರೋ ಅಂಥವರು ಅವರು, ಅವರು ಪಡೆಯತಕ್ಕ ಸಂಬಳಕ್ಕೆ ಸರಿಯಾಗಿ ದೇಶಕ್ಕೆ ಅವರು ದುಡಿಯಬೇಕು. ಕೆಲಸಕ್ಕೆ ತಕ್ಕ ಸಂಬಳ, ಸಂಬಳಕ್ಕೆ ತಕ್ಕ ಹಾಗೆ ಕೆಲಸ ಇರಬೇಕು. ಕೆಲಸವನ್ನು ನಿರ್ವಂಚನೆಯಿಂದ ಮಾಡಿ ಸಂಬಳ ಪಡೆದರೆ ಅದರಿಂದ ಉಭಯತ್ರರಿಗೂ ಸಾರ್ಥಕ. ಸರ್ಕಾರ ದವರು ಹೀಗೆ ಒಂದು ನಿರ್ಮಲ ಮನಸ್ಸಿನಿಂದ ಕೆಲಸ ಮಾಡುವವರಾಗಿದ್ದರೆ ನಮ್ಮ ಹಣಕಾಸಿನ ಮಂತ್ರಿಗಳಿಗೆ ಮುಚ್ಚು ಮರೆಯಿಲ್ಲ ಈ ಸರ್‌ಛಾರ್ಜು ವಿಚಾರ ಹೇಳುವಂತ ಅಗತ್ಯವಿರಲಿಲ್ಲ. ಈಗ ಲಾದರೂ ನಮ್ಮ ಸರ್ಕಾರದವರು ಆಡಳಿತದಲ್ಲಿ ತಮ್ಮ ಖರ್ಚು ವೆಚ್ಚಗಳನ್ನು ಕಡಿಮೆ ಮಾಡ ಬೇಕೆಂದು ನಾನು ಸಲಹೆಮಾಡುತ್ತೇನೆ. ಆದರೆ ಈಗ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವಾಡಳಿತ ವಿದೆಯೋ ಅಥವಾ ಪೋಲೀಸ್ ರಾಜ್ಯ ಆಡಳಿತ ನಡೆಯುತ್ತಿದೆಯೋ ಗೊತ್ತಾಗುವಂತಿಲ್ಲ. ಈ ಹಿಂದೆ ಪೋಲಿಸ್ ಬಜೆಟ್ ಇಷ್ಟಿರುತ್ತಿರಲಿಲ್ಲ. ಇದೇ ರೀತಿ ಈ ಒಂದು ಪೋಲಿಸ್ ಬಾಬಗೇ ಅಲ್ಲಿ ಇನ್ನು ಬೇರೆ ಯಾವ ಇಲಾಖೆಯನ್ನೇ ತೆಗೆದು ಕೊಳ್ಳಲಿ. ಹಳೇ ಮೈಸೂರು ರಾಜ್ಯವಿದ್ದಾಗ ವಿದ್ಯಾ ಇಲಾಖೆ ಪಬ್ಲಿಕ್‌ಹೆಲ್ತ್, ಇಂಡಸ್ಟ್ರಿಸ್ ಹೀಗೆ ಯಾವ ಬಾಬನ್ನೇ ತೆಗೆದುಕೊಳ್ಳಲ್ಲಿ ಅವುಗಳಿಗೆ 16–20 ಕೋಟಿ ರೂಗಳನ್ನು ಬಡ್ಜೆಟ್ಟಿನಲ್ಲಿ ತೋರಿಸುತ್ತಿರ ಲಿಲ್ಲ. ಅಂದರೆ ಆಗ ಈ ಮಂತ್ರಿಗಳಿರಲಿಲ್ಲ.

ಶ್ರೀ ಟಿ. ಸುಬ್ರಹ್ಮಣ್ಯ.—ನಾವು ಅಷ್ಟು ಹಣವನ್ನು ಎಂದೂ ಖರ್ಚುಮಾಡಿಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಹಣವನ್ನೇನೋ ಖರ್ಚು ಮಾಡಿದ್ದೀರಿ. ಆದರೆ ಅದಕ್ಕೆ ತಕ್ಕಹಾಗೆ ಕೆಲಸಕಾರ್ಯಗಳು ಮಾತ್ರ ಆಗಿಲ್ಲ. ಪ್ರಜಾಪ್ರಭುತ್ವ ಇಲ್ಲದಂಥ ಕಾಲದಲ್ಲಿ ಪೋಲಿಸ್ ಬಾಬಿಗೆ 37 ಲಕ್ಷ ಮಾತ್ರ ಖರ್ಚಾಗುತ್ತಿತ್ತು. ಆದರೆ ಜನತಾ ಸರ್ಕಾರ ಬಂದಮೇಲೆ ಈ ಪೋಲಿಸ್ ಖಾತೆಯ ವೆಚ್ಚ 3¾ ಕೋಟಿಗೇರಿದೆ. ''ಆಗಿದ್ದ ಸರ್ಕಾರ ಕಾಂಗ್ರೆಸ್ಸನ್ನು ಸದೆ ಬಡಿಯುತ್ತಿದೆ. ರಾಜ–ಮಹಾರಾಜರುಗಳಿಗೆ ಬೆಂಬಲವಾಗಿದೆ. ಆಗಿದ್ದ ಪೋಲಿಸ್ ಕೇವಲ ಆಗಿನ ಸರ್ಕಾರಕ್ಕೆ ಬೆಂಬಲವಾಗಿದೆ, ದೇಶದ ಹಣವೆಲ್ಲ–ಪೋಲೀಸರಿಗೆ ವೆಚ್ಚವಾಗುತ್ತಿದೆ, ಇಷ್ಟು

(ಶ್ರೀ ಬಿ. ಕೆ. ಪುಟ್ಟರಾಮಯ್ಯ)

ಹಣ ಪೋಲಿಸ್ ಆಡಳಿತಕ್ಕೇಕೆ ಇರಬೇಕು'' ಎಂತ ಆ ದಿವಸ ನೀವು ಹೇಳುತ್ತೀದ್ದಿರಿ. ಆ ದಿವಸ ಹಾಗೆ ಹೇಳುತ್ತಿದ್ದ ನೀವು ಈ ದಿವಸ ಏನು ಮಾಡಿದ್ದೀರಿ?

The House adjourned for recess at Three of the Clock and reassembled at Thirty Minutes Past Three of the Clock.

[Mr. DEPUTY SPEAKER in the Chair.]

ಶ್ರೀ ಬಿ. ಕೆ. ಪುಟ್ಟರಾಮಯ್ಯ.— ಸ್ವಾಮಿ, ನಾನು ಪೋಲಿಸ್ ಇಲಾಖೆಯ ಮೇಲೆ ಮಾತನಾಡುತ್ತಿದ್ದೇನು. ನಮ್ಮ ಹಳೇ ಮೈಸೂರಿನ ಬೇಜವಾಬುದಾರಿ ಸರಕಾರ ಇರುವಾಗ 39 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆಂದು ನಾನು ಹೇಳುತ್ತಿದ್ದೆನು. ಆದರೆ ಈಗ ಪ್ರಜಾಪ್ರಭುತ್ವ ಬಂದು 13 ವರ್ಷಗಳಾದರೂ ಕೂಡ ದೇಶದಲ್ಲಿ ಕ್ರೈಮ್ಸ್ ಮತ್ತು ಮರ್ಡರ್ಸ್ ಹೆಚ್ಚುತ್ತಾ ಇವೆಯೇ ವಿನಾ ಕಡಮೆಯಾಗುತ್ತಿಲ್ಲ. ನಾನು ಇದನ್ನು ಹೇಳುವಾಗ ನಾವು ಪ್ರಜಾಪ್ರಭುತ್ವದಲ್ಲಿ ಇದ್ದೇವೆಯೇ ಇಲ್ಲವೇ ಎಂದು ಅನ್ನಿಸುತ್ತದೆ. ಪೋಲೀಸ್ ಇಲಾಖೆಯ ಮೇಲೆ ಕೋಟ್ಯಾಂತರ ರೂಪಾಯಿ ಹಣ ಖರ್ಚುಮಾತ್ರ ಆಗುತ್ತಿದೆ. ಈಗ ದೇಶದಲ್ಲಿ ಸರಿಯಾದ ರಕ್ಷಣೆ ಇಲ್ಲದೇ ಇರುವುದರಿಂದ ಕ್ರೈಮ್ಸ್ ಮರ್ಡರ್ಸ್ ಜಾಸ್ತಿಯಾಗುತ್ತಿವೆ. ಎಂಬುದನ್ನು ಸರಕಾರ ಒಪ್ಪಿಕೊಳ್ಳಬೇಕಾಗುತ್ತದೆ. ಪೋಲೀಸ್ ಇಲಾಖೆಯಲ್ಲಿ ಅಧಿಕಾರಿಗಳನ್ನು ಹೆಚ್ಚಿಸಿಬಿಟ್ಟರೆ ಜನಗಳಿಗೆ ರಕ್ಷಣೆ ದೊರೆಯುತ್ತದೆಂದು ಸರ್ಕಾರ ತಿಳಿದುಕೊಂಡಹಾಗೆ ಕಾಣುತ್ತದೆ. ಆದರೆ ಜನರಿಗೆ ಇದರಿಂದ ನೆಮ್ಮದಿ ದೊರೆಯುವುದಿಲ್ಲ. ಪೋಲಿಸ್ ಇಲಾಖೆಯ ಬಗ್ಗೆ ಸರಕಾರವು ಸರಿಯಾದ ಗಮನ ಕೊಟ್ಟಿಲ್ಲವೆಂದು ಹೇಳಬೇಕಾಗುತ್ತದೆ. ಜನತೆಗೆ ಕಿರುಕುಳ ಕೊಡುವುದು ಜಾಸ್ತಿಯಾಗುತ್ತಾ ಇದೆ. ಸರಿಯಾದ ನ್ಯಾಯ ದೊರೆಯುತ್ತಿಲ್ಲ ಎಂಬುದನ್ನು ಖಡಾ ಖಂಡಿತವಾಗಿ ಹೇಳ ಬಯಸುತ್ತೇನೆ. ದೇಶದ ಹಿತದೃಷ್ಟಿಯಿಂದ ಹಣವನ್ನು ಉಪಯೋಗಿಸಿ ಖರ್ಚುಮಾಡದೆ ಸರಕಾರವು ತನ್ನ ಸಿಬ್ಬಂದಿಗಾಗಿ, ತಮ್ಮ ಪಾರ್ಟಿ ಸದಸ್ಯರುಗಳ ಅನುಕೂಲಕ್ಕಾಗಿ ಅವರ ಬೆಳವಣಿಗೆಗಾಗಿ ಪೋಲೀಸ್ ಸಿಬ್ಬಂದಿಯನ್ನು ಉಪಯೋಗಿಸಿ ಕೊಳ್ಳುತ್ತಾ ಹಣ ಖರ್ಚುಮಾಡುತ್ತಿದ್ದಾರೆಂದು ಹೇಳಿದ್ದರೆ ಅದು ತಪ್ಪಾಗಲಾರದು ಎಂದು ಹೇಳುತ್ತೇನೆ. ರೇಷ್ಮೆ ಉದ್ದಿಮೆ ಅಭಿವೃದ್ಧಿ ಹೊಂದುತ್ತಿಲ್ಲ. ಈ ಉದ್ದಿಮೆ ಹಾಳಾಗುತ್ತಿದೆ. ಈ ವಿಚಾರದಲ್ಲಿ ಪೋಲಿಸರಿಗೆ ಕಂಪ್ಲೇಂಟ್ ಕೊಟ್ಟರೆ ಸರಿಯಾದ ತನಿಖೆ ನಡೆಯುವುದಿಲ್ಲ. ಸರಕಾರದವರ ಹಿಂಬಾಲಕರ ಜೊತೆಗೆ ಪೋಲಿಸರು ಇದ್ದುಕೊಂಡು ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಕೆಲಸ ಮಾಡುತ್ತಾರೆ.

ಆ ನಂತರ ಈ ವಿಷಯವನ್ನು ನಾನು ಸರ್ಕಾರದ ಗಮನಕ್ಕೆ ತಂದಾಗ್ಯೂ ಅವರು ಮೇಲ್ಪಟ್ಟ ಅಧಿಕಾರಿಗಳಿಗೆ ಸ್ಥಳಕ್ಕೆ ಹೋಗಿ ನೋಡಿಕೊಂಡು ಬರಲು ಹೇಳಿದರೂ ಕೂಡ ಆಡಳಿತ ಪಕ್ಷದ ಜನಗಳ ಪ್ರಭಾವದಿಂದ ಅವರುಸ್ಥಳಕ್ಕೆ ಭೇಟಿ ಕೊಡಲಿಲ್ಲ. ಪೋಲಿಸ್ ಇಲಾಖೆಗೆ ಇಷ್ಟು ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿರುವುದರಲ್ಲಿ ನನಗಾಗಲೀ, ವಿರೋಧ ಪಕ್ಷದವರಿಗಾಗಲೀ, ಜನಸಾಮಾನ್ಯರಿಗಾಗಲೀ ಒಂದು ಕಾಸನ್ನೂ ಖರ್ಚುಮಾಡುತ್ತಿಲ್ಲ. ಇಷ್ಟು ಹಣವನ್ನು ಕೂಡ ಹಿಂದೆ ಯಾವ ಬೇಜವಾಬ್ದಾರಿ ಸರ್ಕಾರ ಜನರನ್ನು ತಮ್ಮ ಹದ್ದಿನಲ್ಲಿಟ್ಟು ಕೊಳ್ಳುವುದಕೊಸ್ಕರ ತಮ್ಮ ಕೈಯಲ್ಲಿ ಜನರಿರಬೇಕು, ಪ್ರಜಾಪ್ರಭುತ್ವ ಸ್ಥಾಪನೆ ಯಾಗಬಾರದೆಂದು ಪೋಲೀಸ್ ಸಿಬ್ಬಂದಿಯನ್ನಿಟ್ಟುಕೊಂಡಿತ್ತೋ ಅದೇ ರೀತಿಯಲ್ಲಿ ಈಗಿನ ಸರ್ಕಾರವೂ ಕೂಡ ಪೋಲೀಸ್ ಸಿಬ್ಬಂದಿಯನ್ನಿಟ್ಟುಕೊಂಡಿದೆ. ಹಿಂದೆ ಕಡಿಮೆ ಖರ್ಚು ಮಾಡುತ್ತಿದ್ದರೂ. ಇವರು ಈಗ ಹೆಚ್ಚು

ಹಣವನ್ನು ಖರ್ಚು ಮಾಡುತ್ತಿದ್ದಾರೆ. ಪ್ರಜಾಪ್ರಭುತ್ವದ ಹೆಸರಿನಲ್ಲಿ ಇವರು dictators ಆಗಿದ್ದಾರೆ. ಇವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲ. ಪ್ರಜಾಪ್ರಭುತ್ವದ ಹೆಸರನ್ನು ಬಳಸಿಕೊಂಡು ತಮ್ಮ ಪಕ್ಷವನ್ನು ಬೆಳಸುತ್ತಿದ್ದಾರೆಂದು ಘಂಟಾಘೋಷವಾಗಿ ಹೇಳುತ್ತೇನೆ. ನಿಜವಾಗಿ ಪೋಲೀಸಿನವರು ಇರಬಾರದೆಂದು ಮಹಾತ್ಮ ಗಾಂಧಿಯವರು ನೆನಸಿದ್ದರು. ರಾಮರಾಜ್ಯ, ಜನತಾರಾಜ್ಯ, ಸುಖೀರಾಜ್ಯ ಇರಬೇಕು ಎಂದು ಅವರು ನೆನಸಿದ್ದರು. ಈ ದೃಷ್ಟಿಯಲ್ಲಿ ನೋಡಿದರೆ ಪೋಲೀಸ್ ಸಿಬ್ಬಂದಿಯನ್ನು ಕಡಮೆ ಮಾಡಿ, ಎಷ್ಟು ಕಡಿಮೆ ಸಂಖ್ಯೆಯಲ್ಲಿ ಪೋಲೀಸಿನವರನ್ನು ಇಟ್ಟುಕೊಳ್ಳಬೇಕೋ, ಬಹಳ ಅವಸರದ ಕಾರ್ಯಕ್ಕೆ ಎಷ್ಟುಬೇಕೋ ಅಷ್ಟನ್ನು ಇಟ್ಟುಕೊಳ್ಳಬೇಕು. ಹಳ್ಳಿಗಾಡಿನಲ್ಲಿ ಮತ್ತು ಪಟ್ಟಣಗಳಲ್ಲಿ ನಡೆಯುತ್ತಿರುವ ಅಚಾತುರ್ಯ, ಅನಾನುಕೂಲಗಳನ್ನು ಕಡಮೆಮಾಡುವುದಕೊಸ್ಕರ ಪಕ್ಷಪಂಗಡಗಳ ಭಾವನೆಯಿಲ್ಲದೆ ಪಂಚಾಯಿತಿಗಳನ್ನು ರಚನೆಮಾಡಬೇಕು. ಹಿಂದಿನ ಕಾಲದಲ್ಲಿ ಪಂಚಾಯಿತಿಗಳು ಇದ್ದು ಜನಗಳು ಕೋರ್ಟು ಕಛೇರಿಗಳಿಗೆ ಹೋಗದಂತೆ ಹಳ್ಳಿಗಳಲ್ಲಿಯೇ ನ್ಯಾಯ ತೀರ್ಮಾನ ಮಾಡಿಕೊಳ್ಳುತ್ತಿದ್ದರು. ಈ ರೀತಿ ಮಾಡಿದರೆ ಹೆಚ್ಚು ಹಣದ ಖರ್ಚಿಲ್ಲದೆ ಜನರಿಗೆ ನ್ಯಾಯ ದೊರೆಯಲು ಅನುಕೂಲವಾಗುತ್ತದೆ. ಇದಕ್ಕಾಗಿ ಪೋಲೀಸ್ ಇಲಾಖೆಯ ಮೇಲೆ ಖರ್ಚುಮಾಡುವ ಹಣವನ್ನು ಕಡಮೆಮಾಡಿ ಜನರಲ್ಲಿ ಉಂಟಾಗುವ ವಿವಾದಗಳನ್ನು ತೀರ್ಮಾನ ಮಾಡಿಕೊಳ್ಳಲು ಅನುಕೂಲವಾಗುವಂಥ ವಾತಾವರಣವನ್ನು ಕಲ್ಪನೆಮಾಡಲು, ಜನತಾ ಪಂಚಾಯಿತಿಗಳನ್ನು ಸ್ಥಾಪಿಸಲು ಒಂದು ಹೊಸ ಇಲಾಖೆಯನ್ನು ಬೇಕಾದರೂ ಸ್ಥಾಪನೆಮಾಡಬಹುದು. ಈ ರೀತಿ ಜನತಾ ಪಂಚಾಯಿತಿಗಳನ್ನುಮಾಡಿ ಸುಮಧುರ ವಾತಾವರಣವುಂಟಾಗುವುದಕ್ಕೆ ಇದರಲ್ಲಿ ರಾಜಕೀಯವನ್ನು ತರದೆ, ಜನರನ್ನು ಮೇಲ್ಮಟ್ಟಕ್ಕೆ ತರುವುದಕ್ಕೆ ಏನೇನು ಆಗಬೇಕೋ ಅದನ್ನೆಲ್ಲವನ್ನೂಮಾಡಬೇಕು. ಆದರೆ ಈ ಕಾರ್ಯ ಅಷ್ಟು ಸುಲಭವೆಂದು ನಾನು ಹೇಳುತ್ತಿಲ್ಲ. ತಕ್ಷಣ ಇದನ್ನು ಸಾಧಿಸುವುದಕ್ಕೆ ಆಗುತ್ತದೆಂದುಸಹ ನಾನು ಹೇಳುತ್ತಿಲ್ಲ. ಸರ್ಕಾರ ಇದರ ಕಡೆ ಪ್ರಯತ್ನವನ್ನುಸಹ ಮಾಡಿಲ್ಲವೆಂದು ಹೇಳುತ್ತಿದ್ದೇನೆ. ಸರ್ಕಾರ ಈ ಕಡೆ ಪ್ರಯತ್ನಮಾಡಿದ್ದರೇ ಪ್ರತಿವರ್ಷವೂ ಪೋಲೀಸ್ ಬಡ್ಜೆಟ್ಟನ್ನು ಏರಿಸುವುದರ ಕಡೆ ಹೆಚ್ಚುಗಮನ ಕೊಡುತ್ತಿರಲಿಲ್ಲ. ಸ್ವಲ್ಪ ಸ್ವಲ್ಪವಾದರೂ ಪೋಲೀಸ್ ಬಡ್ಜೆಟ್ಟನ್ನು ಖೋತಾಮಾಡಿ, ಹಳ್ಳಿಗಳಲ್ಲಿ ಒಳ್ಳೆಯ ವಾತಾವರಣ ಕಲ್ಪನೆಮಾಡುವುದಕ್ಕೆ ಗಮನವನ್ನುಕೊಡಬೇಕು. ಈ ತರಹ ಜನತೆಯ ಸೌಹಾರ್ದಕ್ಕೋಸ್ಕರ ಪಾರ್ಟಿ ಪಂಗಡಗಳ ಮೇಲ್ಮಟ್ಟದಲ್ಲಿ ಹೇಗೆ ಜನರನ್ನು ತಯಾರುಮಾಡಬೇಕು ಎನ್ನುವುದಕ್ಕೆ ಒಂದು expert committee ಮಾಡಿದ್ದರೆ ನಾನು ಅದಕ್ಕೆ ಬೇಡವೆಂದು ಹೇಳುತ್ತಿರಲಿಲ್ಲ.

ಶ್ರೀ ಟಿ. ಮರಿಯಪ್ಪ.—Reorganisation ಮಾಡಿರುವುದರಿಂದ ಏನೂ ಪ್ರಯೋಜನ ವಿಲ್ಲವೆಂದು ತಮ್ಮ ಅಭಿಪ್ರಾಯವೇ ?

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಪೋಲೀಸ್ ಬಡ್ಜೆಟ್ ಖೋತಾ ಮಾಡಿಕೊಳ್ಳುವುದಕ್ಕೆ ಏನು ಆಗಬೇಕೋ ಅದಕ್ಕೆ ಪೋಲೀಸ್ ಸಿಬ್ಬಂದಿಯನ್ನು ಕಡಿಮೆ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕಾಗಿತ್ತು. ನೀವು ಎಷ್ಟು ಪೋಲೀಸ್ ಹಾಕಿದರೂ ಜನಗಳಲ್ಲಿ ಸೌಹಾರ್ದ ಕಲ್ಪನೆಯಾಗುವುದಕ್ಕೆ ಪ್ರಯತ್ನ ಮಾಡದೆಯಿದ್ದರೆ, crimes and murders ಹೆಚ್ಚುತಿರುತ್ತವೇ ಹೊರತು ಏನೇನೂ ಪ್ರಯೋಜನವಾಗುವುದಿಲ್ಲ. ಎಲ್ಲ ಪಾರ್ಟಿಗಳಜನರೂ ಸೇರತಕ್ಕ ಒಂದು expert committee ಮಾಡಿ ಯಾವುದೇ ರೀತಿಯಿಂದ ಜನಗಳಲ್ಲಿ ಸೌಹಾರ್ದದಿಂದ ಬಾಳುವುದಕ್ಕೆ ಅವಕಾಶಮಾಡಿಕೊಡಬೇಕು. ಇದರಲ್ಲಿ ರಾಜಕೀಯವನ್ನು ಮಿಶ್ರಮಾಡದೆ ಜನ ಯಾವ ಯಾವ ಪಾರ್ಟಿಗಳಲ್ಲಿದ್ದರೂ ಕೂಡ ದೇಶದ ಪ್ರಜೆಗಳೆಲ್ಲರೂ ಒಂದೇ ಎನ್ನುವ ಮನೋಭಾವನೆ ಬರಲು ಯಾವರೀತಿಯ ವಾತಾವರಣ ಕಲ್ಪಿಸಿದರೆ ಸರಿಹೋಗುತ್ತದೆನ್ನುವುದಕ್ಕೆ ಒಂದು ಕಮಿಟಿಯನ್ನು ಮಾಡಿ, ಅದರಿಂದ ರಿಪೋರ್ಟನ್ನು ತರಿಸಿಕೊಂಡು, ಅದರ ಸಿಫಾರಸಿನಂತೆ ವ್ಯವಸ್ಥೆ ಮಾಡಬೇಕೆಂದು ನಾನು ನಿಮಗೆ ಸಲಹೆ ಮಾಡುತ್ತೇನೆ. ಇನ್ನುಳಿದ ವಿಷಯಗಳನ್ನು ಪೋಲೀಸ್ ಡಿಮಾಂಡ್ ಬಂದಾಗ ತಮ್ಮ ಗಮನಕ್ಕೆ ತರುತ್ತೇನೆ.

(ಶ್ರೀ ಬಿ. ಕೆ. ಪುಟ್ಟರಾಮಯ್ಯ)

ಪೋಲೀಸ್ ಇಲಾಖೆಗೆ ಎಷ್ಟು ಹಣ ಖರ್ಚುಮಾಡಬಾರದೆಂದು ಹೇಳುವಾಗ ಇತರ ಇಲಾಖೆ ಗಳಿಗೆ ಖರ್ಚುಮಾಡ ಬೇಡಿ ಎಂದು ಹೇಳುವುದಿಲ್ಲ. Nation Building Departments ಇವೆ. ಅವುಗಳಿಗೆ ಹೆಚ್ಚು ಹಣವನ್ನು ಖರ್ಚುಮಾಡಲೇ ಬೇಕು. ವಿದ್ಯಾಭ್ಯಾಸಕ್ಕೆ 16 ಕೋಟಿ ರೂಪಾಯಿ ಕೇಳಿದ್ದೀರಿ ನಾವು ಬೇಡವೆನ್ನುವುದಿಲ್ಲ. ಹಾಗೆಯೇ ಕೈಗಾರಿಕೆಗಳಿಗೆ ಖರ್ಚುಮಾಡುವುದಕ್ಕೆ ಬೇಡವೆನ್ನುವುದಕ್ಕಾಗುವುದಿಲ್ಲ.

ವಿದ್ಯಾಭ್ಯಾಸದ ಇಲಾಖೆಯನ್ನು ತೆಗೆದುಕೊಂಡರೆ ಕಡ್ಡಾಯ ಶಿಕ್ಷಣವೆನ್ನುವುದು ಪುಸ್ತಕ ದಲ್ಲಿ ಉಳಿದಿದೆ. ಅದನ್ನು ಜಾರಿಗೆ ತರಬೇಕಾದರೆ ಹೆಚ್ಚು ಖರ್ಚಾಗುತ್ತದೆ.

ಶ್ರೀ ಟಿ. ಮರಿಯಪ್ಪ.— ಏಪ್ರಿಲ್ ಒಂದನೆ ತಾರೀಖಿನಿಂದ ಜಾರಿಗೆ ಬರುತ್ತದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.— ಒಳ್ಳೆಯದು, ಆದರೆ ಅದು ಜಾರಿಗೆ ಬರುವುದಕ್ಕೆ ಮುಂಚೆ ಆಗಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಜಾರಿಗೆ ಬಂದರೆ ಬೇಕಾಗುವ ಉಪಾಧ್ಯಾಯರುಗಳೆಷ್ಟುಜನ, ವಿದ್ಯಾರ್ಥಿಗಳೆಷ್ಟುಜನ ಇದ್ದಾರೆ. ಶಾಲೆಗಳಿವೆಯೇ, ಕಟ್ಟಡ ಗಳಿವೆಯೇ, ಕಟ್ಟಡಗಳಿಲ್ಲದೆಯಿದ್ದರೆ ಏನು ವ್ಯವಸ್ಥೆ ಮಾಡಬೇಕೆಂಬುದನ್ನು ಮೊದಲೇ ಗಮನಕ್ಕೆ ತೆಗೆದುಕೊಳ್ಳಬೇಕು. ಇಷ್ಟು ಶಾಲೆಗಳನ್ನು ಕೊಟ್ಟಿದ್ದೇವೆ ಎಂದು ವರ್ಷ ವರ್ಷವೂ ಹೇಳುತ್ತಾ ಬರುತ್ತಿದ್ದಾರೆ. ಅದರಂತೆ ಸಾಲವೂ ಹೆಚ್ಚುತ್ತಾಇದೆ. ಇದರಿಂದ ನಾನು ಹೇಳುವುದು ಶಾಲೆ ಗಳನ್ನು ಹೆಚ್ಚು ಮಾಡುವುದಕ್ಕೆ ಮೊದಲು ಟೀಚರುಗಳನ್ನು ಮತ್ತು ಇನ್ನಿತರ ನೌಕರರುಗಳನ್ನು ಒದಗಿಸಿಕೊಂಡು ಅನಂತರ ಶಾಲೆಗಳನ್ನು ಹೆಚ್ಚುಮಾಡುವುದು ಸರಿಯಾಗಿರುತ್ತದೆ. ನಾವು ಕೊಡುವ ಕಟ್ಟಕಡೆಯ ಕಾಸೂ ಕೂಡ ನ್ಯಾಯವಾಗಿ ಖರ್ಚಾಗುವ ಹಾಗೆ ಏರ್ಪಾಟು ಮಾಡಬೇಕೆಂದು ನಾನಿಲ್ಲೀ ಸಲಹೆ ಮಾಡುತ್ತೇನೆ. ಉದಾಹರಣೆಯಾಗಿ ಹೇಳುವುದಾದರೆ ಮೆಡಿಕಲ್ ಇಲಾಖೆಯಲ್ಲಿ ಅಲ್ಲಿನ ಉಪಯೋಗಕ್ಕಾಗಿ ತಾವು ಎಷ್ಟುಹಣ ಕೊಟ್ಟರೂ ನಾವು ಬೇಡ ಎಂದು ಹೇಳುವುದಕ್ಕಾಗು ವುದಿಲ್ಲ. ನಮ್ಮ ದೇಶದಲ್ಲಿ ಮುಖ್ಯವಾಗಿರುವುದು ವೈದ್ಯ ಮತ್ತು ವಿದ್ಯೆ. ಇವೆರಡು ಒಂದಕ್ಕೊಂದು ಹೊಂದಿಕೊಂಡು ಹೋಗುತ್ತವೆ. ಆರೋಗ್ಯ ವಿಲ್ಲದಿದ್ದರೆ ವಿದ್ಯೆ ಬರುವುದಿಲ್ಲ. ಆರೋಗ್ಯವಿದ್ದು ವಿದ್ಯೆ ಬಾರದೆ ಇದ್ದರೆ ಅದರಿಂದ ಉಪಯೋಗವಿಲ್ಲ. ಆದುದರಿಂದ ಹೆಚ್ಚು ಹಣ ವನ್ನು ಆಸ್ಪತ್ರೆಗಳಿಗಾಗಿ ಮತ್ತು ಶಿಕ್ಷಕರಿಗಾಗಿ ಖರ್ಚುಮಾಡುವುದು ಆವಶ್ಯಕವಾಗಿರುತ್ತದೆ. ಹಿಂದೆ ಎಷ್ಟು ಆಸ್ಪತ್ರೆ ಗಳಿದ್ದುವು ಅವುಗಳ ನೀತಿ ಏನಾಗಿತ್ತು ಎನ್ನುವುದು ಎಲ್ಲರಿಗೂ ತಿಳಿದುದೇ.

ಶ್ರೀ ಟಿ. ಮರಿಯಪ್ಪ.— ಈಗ ಎಷ್ಟೋ ಉತ್ತಮ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಇಲ್ಲ ಎನ್ನುವುದನ್ನು ತಾವು ಒಪ್ಪಿಕೊಳ್ಳಬೇಕು. ಇನ್ನು ಹೆಲ್ತ್ ಇಲಾಖೆಯ ವಿಚಾರವಾಗಿ ನಾವು ಸುಮಾರು ಎರಡು ವರ್ಷಗಳಿಂದಲೂ ಇಲ್ಲಿ ಹೇಳುತ್ತಲೇ ಇದ್ದೇವೆ, ಅದರ ಕಡೆಗೆ ಏನೂ ಗಮನ ಕೊಟ್ಟಹಾಗೆ ಕಾಣಲಿಲ್ಲ. ಈ ಹೆಲ್ತ್ ಇಲಾಖೆಯಲ್ಲಿರುವ ಕೆಲವು ಯೋಗ್ಯರಾದ ಅಧಿಕಾರಿಗಳನ್ನು ಪರದೇಶಕ್ಕೆ ತರಬೇತಿಗೆ ಕಳುಹಿಸಿಕೊಟ್ಟರೆ ಅವರಿಗಾಗಿ ಕೊಟ್ಟ ಹಣವೆಲ್ಲ ಉಳಿತಾಯ ಮಾಡಿಕೊಂಡು ಜಾಗ್ರತೆ ಅಲ್ಲಿ ಪಾಸುಮಾಡಿಕೊಂಡು ಇಲ್ಲಿಗೆ ಬಂದು ನಮ್ಮ ದೇಶದ ಸೇವೆಮಾಡಬೇಕೆಂದು ಇದ್ದರೂ ಅಂತಹವರನ್ನು ಪರದೇಶಕ್ಕೆ ಕಳುಹಿಸುತ್ತಿಲ್ಲ. ಇದರಲ್ಲಿಯೂ ನೀವು ಜಾತಿ, ಕುಲ ಎಂದು ಮಾಡುತ್ತಿರುವುದರಿಂದ ಸರಿಯಾದ ಅಧಿಕಾರಿಗಳಿಗೆ ತರಬೇತಿ ಸಿಗುತ್ತಿಲ್ಲ. ಈ ದೃಷ್ಟಿಯಿಂದ ನಾನು ಹೇಳುವುದು, ನೀವು ಎಲ್ಲಿಯವರೆಗೆ ಈ ಜಾತಿ, ಕುಲಗಳ groove ಎಂದು ಹೊರಗೆ ಇರುವುದಿಲ್ಲವೋ ಅಲ್ಲಿಯವರೆಗೆ ನೀವು ದೇಶಸೇವೆ ಮಾಡುವುದಕ್ಕೆ ಆಗುವುದಿಲ್ಲ. ಹಿಂದೆ ಬೇಜವಾಬುದಾರಿ ಸರಕಾರವಿದ್ದ ಕಾಲದಲ್ಲಿ ಯಾವರೀತಿಯಾಗುತ್ತಿದ್ದಿತೋ ಆ ತರಹ ಈಗ ಆಗುತ್ತಿದೆ. ಆದುದರಿಂದ ವಿಶಾಲ ಹೃದಯದಿಂದ ಈ ದೇಶದ ಉನ್ನತಿಯನ್ನು ಮಾಡುವುದಕ್ಕೆ ಈ ರೀತಿ ಮಾಡುವುದಾದರೆ ಅದರಿಂದ ನಷ್ಟವೇನೂ ಆಗುವುದಿಲ್ಲ. ಕೆಲವು ಕಡೆಗಳಲ್ಲಿ

ನೀವು ಡಾಕ್ಟರುಗಳನ್ನು ಕಳುಹಿಸಿದ್ದೀರಿ. ಆದರೆ ಅಲ್ಲಿ ಆಸ್ಪತ್ರೆಗಳೇ ಇಲ್ಲ. ಆಸ್ಪತ್ರೆಗಳಿದ್ದರೆ ಅಲ್ಲಿ ಔಷಧಗಳಿರುವುದಿಲ್ಲ. ಹೀಗೆ ಔಷಧಗಳು ಇಲ್ಲದೇ ಇರುವ ಎಷ್ಟೋ ಆಸ್ಪತ್ರೆಗಳೂ ಕೂಡ ಈಗ ಇವೆ. ಈ ಆಸ್ಪತ್ರೆಗಳು ಸುಲಲಿತವಾಗಿ ನಡೆದುಕೊಂಡು ಹೋಗುವಂತೆ ಮಾಡುವ ಕಾರ್ಯ ನಿಮ್ಮದು. ಈ ಪಬ್ಲಿಕ್ ಹೆಲ್ತ್ ಡಿಪಾರ್ಟ್‌ಮೆಂಟಿನ ವಿಚಾರವಾಗಿ ಹೇಳುವಾಗ ಈ ಇಲಾಖೆಯವರು ಹಳ್ಳಿ ಜನಗಳ ಕಡೆ ಲಕ್ಷ್ಯವನ್ನೇ ಕೊಡುತ್ತಿಲ್ಲ. ಪಟ್ಟಣಗಳಲ್ಲೇ ನೋಡಿದರೆ ಸೊಳ್ಳೆಕಾಟ ಹೆಚ್ಚಾಗುತ್ತಿದೆ. ಇದನ್ನು ತಡೆಗಟ್ಟುವುದೂ ಅಸಾಧ್ಯವಾಗುತ್ತಿದೆ. ಹಳ್ಳಿಯ ಜನರಿಗೆ ಬಾಯಿಲ್ಲ ಅವರೇನೂ ಹೇಳುವುದಿಲ್ಲ. ಮತ್ತು ಸರ್ಕಾರಕ್ಕೆ ಒತ್ತಾಯ ತರುತ್ತಿಲ್ಲ ಎಂದು ಸುಮ್ಮನಿದ್ದಾರೆ. ಆದರ ಪಟ್ಟಣಗಳ ಕಡೆಗಳಲ್ಲಿ ಈ ಇಲಾಖೆಯವರು ಎಷ್ಟು ಮಟ್ಟಿಗೆ ಕೆಲಸಮಾಡಿ ಸೊಳ್ಳೆಗಳ ಕಾಟವನ್ನು ತಪ್ಪಿಸಬೇಕೋ ಅಷ್ಟು ಮಟ್ಟಿಗೆ ಮಾಡುತ್ತಿಲ್ಲ. ಎಷ್ಟು ಪ್ರಮಾಣದಲ್ಲಿ ಕೆಲಸವಾಗಬೇಕೋ ಆ ಪ್ರಮಾಣದಲ್ಲಿ ಕೆಲಸವಾಗುತ್ತಿಲ್ಲ, ಕೆಲಸಮಾಡುತ್ತಿಲ್ಲ ಎಂದು ನಾನು ಇಲ್ಲೇ ಹೇಳುತ್ತೇನೆ.

ಇನ್ನು ಯೂನಿವರ್ಸಿಟಿ ಎಜುಕೇಷನ್ನಿನ ವಿಚಾರದಲ್ಲಿ ಒಂದೆರಡು ವಿಚಾರಗಳನ್ನು ಹೇಳಬೇಕಾಗಿದೆ. ಯೂನಿವರ್ಸಿಟಿಗಳಿಂದ ಕಾಲೇಜುಗಳು ಹೊರಗೆ ಬಂದ ಮೇಲೆ ಅದರ ಕಂಟ್ರೋಲು ತಪ್ಪಿಹೋಗಿದೆ. ಕೆಲವು ಕಾಲೇಜುಗಳಲ್ಲಿ ಪ್ರೊಫೆಸರುಗಳೇ ಕೆಲಸ ಮಾಡುತ್ತಿಲ್ಲ. ಅವರುಗಳು ತಮ್ಮ ಕೆಲಸವನ್ನೆಲ್ಲಾ ಅಲ್ಲಿರುವ ಲಕ್ಚರರುಗಳಿಗೇ ವಹಿಸಿ ಅವರಿಂದ ಕೆಲಸ ಮಾಡಿಸುತ್ತಿರುತ್ತಾರೆ. ಇಂತಹ ಅಧಿಕಾರಿಗಳನ್ನು ತಡೆಗಟ್ಟುವಂತಹ ಅಧಿಕಾರಿಗಳು ಯೂನಿವರ್ಸಿಟಿಯಲ್ಲಿರುವುದು ಅವಶ್ಯಕ. ಅದರಲ್ಲೂ ಈ ಪ್ರೊಫೆಸರುಗಳನ್ನೇ ಈಗ ವೈಸ್‌ಛಾನ್ಸಲರ್ ಆಗಿ ಮಾಡುತ್ತಿದ್ದಾರೆ. ಇದರಿಂದ ಅಲ್ಲಿನ ಲಕ್ಚರರುಗಳಿಗೆ ಇವರ ಸದರದಿಂದಾಗಿ ಇವರನ್ನು ಕೇಳುವವರೇ ಇರುವುದಿಲ್ಲ. ಇನ್ನು ಮುಂದೆ ಈ ವಿಶ್ವವಿದ್ಯಾನಿಲಯಗಳಲ್ಲಿರುವವರನ್ನು ಬಿಟ್ಟು ಹೊರಗಿನವರಾಗಿರತಕ್ಕವರನ್ನು ಇಲ್ಲಿ ಅಡ್ಮಿನಿಸ್ಟ್ರೇಟರಾಗಿ ನೇಮಕ ಮಾಡಿದರೆ ಆಗ ಯಾರೂ ಇವರನ್ನು ಅಪ್ರೋಚ್ ಮಾಡುವುದಕ್ಕೆ ಸಾಧ್ಯವಾಗವುದಿಲ್ಲ. ಇದರಿಂದ ಯೂನಿವರ್ಸಿಟಿ ಎಜುಕೇಷನ್ನು ಎನ್ನುವುದನ್ನು ಸರಿಯಾಗಿ ಜಾರಿಗೆ ತರುವುದಕ್ಕೆ ಸಾಧ್ಯವಾಗುತ್ತದೆ. ಹಾಗಿಲ್ಲದೇ ಈಗಿರುವ ಪದ್ಧತಿಯೇ ಇದ್ದರೆ ಶಿಕ್ಷಾವ್ಯವಸ್ಥೆಯು fair ಆಗಿರುವುದಕ್ಕೆ ಆಗುವುದಿಲ್ಲ. ಇದರಿಂದ ವಿದ್ಯಾಭ್ಯಾಸ ಮಾಡುವ ಹುಡುಗರುಗಳಿಗೂ ಸರಿಯಾಗಿ ವಿದ್ಯಾಭ್ಯಾಸ ದೊರೆಯುವುದಿಲ್ಲ. ಈಗ ಸುಮಾರು ಹತ್ತು ಹನ್ನೆರಡು ವರ್ಷಗಳಿಂದ ಯೂನಿವರ್ಸಿಟಿಯಲ್ಲಿ ಚೆನ್ನಾಗಿ ಕೆಲಸಮಾಡುತ್ತಿರುವ ಸುಮಾರು 300-400 ಲಕ್ಚರರುಗಳನ್ನು ಇನ್ನು ಪರ್ಮನೆಂಟ್ ಮಾಡಲಿಲ್ಲ. ಖಾಯಂ ಆಗಿರುವ ಪ್ರೊಫೆಸರುಗಳೆಲ್ಲಾ ಸಂಬಳ ತೆಗೆದುಕೊಂಡು ಕೆಲಸಗಳನ್ನೆಲ್ಲಾ ಲಕ್ಚರರುಗಳೇ ಮಾಡುತ್ತಿದ್ದಾರೆ. ಯೂನಿವರ್ಸಿಟಿಯ ಆಡಳಿತ ಕ್ರಮವನ್ನು ಇನ್ನು ಚೆನ್ನಾಗಿ ಮಾಡಬೇಕೆಂದು ಈಗ್ಗೆ ಮೂರು ನಾಲ್ಕು ವರ್ಷಗಳ ಹಿಂದೆ ಚರ್ಚೆಯಾಗಿ ಇಲ್ಲಿಗೆ ಬೇಕಾಗುವ ಅಧಿಕಾರಿಗಳನ್ನು ಚುನಾಯಿಸಲು ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ವಹಿಸಬೇಕೆಂದು ಆಗ ಯೂನಿವರ್ಸಿಟಿಯವರು ಚರ್ಚಿಸುತ್ತಿದ್ದರು. ಅಲ್ಲಿಂದೀಚೆಗೆ ಈಗ ಸರಕಾರದವರೇ ಈ ಕಾಲೇಜುಗಳ ಆಡಳಿತವನ್ನು ತೆಗೆದುಕೊಂಡಿದ್ದಾರೆ. ಈ ವ್ಯವಹಾರದಲ್ಲೇ, ಇಲ್ಲಿ ಕೆಲಸ ಮಾಡುವ ಬಡನಾಕರರುಗಳ ಎಂಟು ವರ್ಷ, ಹತ್ತು ವರ್ಷ, 12ರಿಂದ 13ವರ್ಷಗಳು ಕೆಲಸ ಮಾಡಿದ್ದರೂ ಅವರುಗಳನ್ನು ಖಾಯಂ ಮಾಡಲು ಏನಾದರೂ ಯೋಚನೆ ಮಾಡಿದ್ದೀರಾ ? ಅವರುಗಳು ಕೂಡ ನಮ್ಮ ದೇಶದವರು, ನಮ್ಮ ದೇಶಸೇವೆಯನ್ನು ಮಾಡಬೇಕೆಂದು ಇಲ್ಲೇ ಕೆಲಸ ಮಾಡುತ್ತಿದ್ದಾರೆ. ಅವರುಗಳು ಹೊರಗಡೆ ಹೋದರೆ ಅವರಿಗೆ ಹೆಚ್ಚು ಸಂಬಳ ಸಿಗುತ್ತದೆ ಮತ್ತು ಬೇರೆ ಯೂನಿವರ್ಸಿಟಿಗಳಲ್ಲಿ ಇನ್ನೂ ಒಳ್ಳೆಯ ಕೆಲಸಗಳು ಸಿಗುತ್ತವೆ. ಅವರೇನೂ ಬೀದಿಯ ನಾಯಿಗಳಂತೆ ತಿರುಪೆ ಮಾಡುವಂತಹ ಜನಗಳಲ್ಲ. ಮೊದಲಿನಿಂದ ಅವರು ಮೈಸೂರಿನವರೇ ಇರುವುದರಿಂದ, ಮೈಸೂರನ್ನು ಬಿಟ್ಟು ಹೋಗಬೇಕಲ್ಲ ಎಂದು ಬಿಡದೇ ಇಲ್ಲೇ ನಿಂತಿದ್ದಾರೆ. ಅವರೊಡನಿದ್ದ ಕೆಲವರು ಹೊರ ದೇಶಕ್ಕೆ ಹೋಗಿ ಕೈತುಂಬಾ ಸಂಬಳ ಪಡೆದುಕೊಂಡು ಸೌಖ್ಯವಾಗಿದ್ದಾರೆ. ಆದರ ಇಲ್ಲಿರುವ ನೌಕರರುಗಳು ನಮ್ಮ ಮೈಸೂರಿನ ಒಂದು ಪ್ರೇಮದಿಂದ

(ಶ್ರೀ ಬಿ. ಕೆ. ಪುಟ್ಟರಾಮಯ್ಯ)

ದೇಶ ಸೇವೆಯನ್ನು ಮಾಡಬೇಕೆಂಬ ಆಸೆಯಿಂದ ಅವರು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಇಂತಹ ಯೂನಿವರ್ಸಿಟಿ ಲೆಕ್ಚರರುಗಳನ್ನು ಇನ್ನು ನೀವು ಖಾಯಂ ಮಾಡದೇ ಇರುವುದು ಯಾವ ನ್ಯಾಯ? ಇವರನ್ನು ಬೇಗನೇ ಖಾಯಂ ಮಾಡಬೇಕೆಂದು ಸರಕಾರಕ್ಕೆ ಒತ್ತಾಯಮಾಡಿ ಇಲ್ಲಿ ಹೇಳುತ್ತೇನೆ. ಯೂನಿವರ್ಸಿಟಿಯಲ್ಲಿ ಅಪಾಯಿಂಟ್‌ಮೆಂಟುಗಳನ್ನು ಮಾಡುವಾಗ ನಮ್ಮ ಮಕ್ಕಳಿಗೆ ಸರಿಯಾಗಿ ವಿದ್ಯೆಯನ್ನು ಒದಗಿಸುವ ಶಿಕ್ಷಕರುಗಳನ್ನು ನೇಮಕ ಮಾಡುವಾಗ ಜಾತಿ ಭೇದಗಳನ್ನು ಬಿಟ್ಟುಮಾಡಬೇಕು. ಅಡ್ಮಿನಿಸ್ಟ್ರೇಷನ್ನಿನ ಕೆಲಸ ಮಾಡುವಾಗ ಡೆಪ್ಯುಟಿ ಕಮೀಷನರ್ ಫಾರ್ ಎಕ್ಸಾಮಿನೇಷನ್ಸ್ ಎಂದು ಈಗ ದೊಡ್ಡ ದೊಡ್ಡ ಹುದ್ದೆಗಳನ್ನೂ ತಂದಿದ್ದಾರೆ. ಇದನ್ನು ಹೇಳುವಾಗ ಒಂದು ವಿಚಾರ ತಮ್ಮ ಗಮನಕ್ಕೆ ತರುತ್ತೇನೆ. ನಿಮ್ಮ ತಮ್ಮ ಒಬ್ಬ ದಡ್ಡನಾದವನು ಇದ್ದರೆ ಅವನ ಕೈಯಲ್ಲಿ ನಿಮ್ಮ ಮಕ್ಕಳಿಗೆ ಪಾಠ ಹೇಳಿಸಲು ನೀವೇ ಒಪ್ಪುವುದಿಲ್ಲ. ನಮ್ಮ ಮಕ್ಕಳಿಗೆ ಸರಿಯಾದ ಶಿಕ್ಷಣ ದೊರೆಯಬೇಕಾದರೆ ಸರಿಯಾದ ಶಿಕ್ಷಕರುಗಳನ್ನು ನೇಮಕ ಮಾಡಬೇಕು. ಮತ್ತು ಈಗ ವಿಶ್ವವಿದ್ಯಾನಿಲಯುಗಳಲ್ಲಿ ಪ್ರೊಫೆಸರುಗಳಾಗಿರುವವರನ್ನೇ ವೈಸ್ ಚಾನ್ಸಲರ್ ಆಗಿ ಮಾಡುತ್ತಿದ್ದಾರೆ. ಈ ರೀತಿ ಮಾಡಬಾರದು. ಇನು ಮುಂದೆಯಾದರೂ ವೈಸ್ ಚಾನ್ಸಲರುಗಳನ್ನು ನೇಮಕ ಮಾಡುವಾಗ ಆಡಳಿತದಲ್ಲಿ ಹೆಚ್ಚು ಅನುಭವವಿರುವವರನ್ನು ಮಾತ್ರ ವೈಸ್‌ಛಾನ್ಸಲರ್ ಆಗಿರುವಂತೆ ನೇಮಕ ಮಾಡಬೇಕೆಂದು ನಾನು ಹೇಳುತ್ತೇನೆ.

4-00 P.M.

ಈಗ ಮೈಸೂರು ದೇಶದಲ್ಲಿ ಎರಡು ಯೂನಿವರ್ಸಿಟಿಗಳಿವೆ. ಬೆಂಗಳೂರಿನ ಯೂನಿವರ್ಸಿಟಿಯನ್ನು ಪರಿವರ್ತನೆಮಾಡಿ ಕೆಲವು ಕಾಲೇಜುಗಳನ್ನೆಲ್ಲಾ ಯೂನಿವರ್ಸಿಟಿಗೆ ಕೊಟ್ಟು ಇಲ್ಲಿ ಒಂದು ಹೊಸ ಯೂನಿವರ್ಸಿಟಿಯನ್ನು ಆಂಧ್ರ ಪ್ರದೇಶದಲ್ಲಿ ಮಾಡಿದಂತೆ ಕೂಡಲೆ ಸ್ಥಾಪನೆ ಮಾಡಬೇಕೆಂದು ನಾನು ಹೇಳುತ್ತೇನೆ. ಬೆಂಗಳೂರಿನಲ್ಲಿ ಹೆಚ್ಚು ಯೂನಿವರ್ಸಿಟಿಗಳು ಇರುವ ಹಾಗೆ ಮಾಡಿ ಬೆಂಗಳೂರನ್ನೇ ಕೇಂದ್ರವನ್ನಾಗಿ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಇದು ಇಕಾನಮಿಗೆ ಒಂದು ಸಲಹೆಯೋ?

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಇಕಾನಮಿಗೆ ಅಲ್ಲ. ಕೆಲವು ನೇಷನ್ ಬಿಲ್ಡಿಂಗ್ ಆಕ್ಟಿವಿಟೀಸಿಗೆ ಹೆಚ್ಚು ಖರ್ಚು ಮಾಡುವಾಗ ನಿಮ್ಮ ಕಿವಿ ಎಲ್ಲೋ ಯೋಚನೆಮಾಡುತ್ತಿರುತ್ತದೆ. ಎಷ್ಟು ಬೇಕಾದರೂ ಅದಕ್ಕೆ ಕೊಡುತ್ತೀರಿ. ನೀವು ಕೊಡುತ್ತೀರಿ, ನಾವು ಕೊಡುತ್ತೇವೆ. ಅದೂ ಅಲ್ಲದೆ ಮಂತ್ರಿಗಳಿಗೆ, ಪೋಲೀಸಿನವರಿಗೆ ಸೆಕ್ರೆಟೇರಿಯಟ್ಟುಗಳಿಗೆ, ಹೆಚ್ಚು ಡಿವಿಷನಲ್ ಕಮಿಷನರ್, ಡೆಪ್ಯುಟಿ ಕಮಿಷನರ್—ಇಂಥಾದ್ದಕ್ಕೆಲ್ಲಾ ಹಿಂದೆ ಎಷ್ಟೋಸಲ ಇಕಾನಮಿ ಸಜೆಷನ್ ಮಾಡಿದೆ. ಇನ್ನೊಂದು ವಿಷಯ ಕೆಲವರು ಈ ಪ್ಲಾನುಗಳೇ ಬೇಡ ಎಂದು ಹೇಳಿದ್ದಾರೆ. ಅಂತಹ ಜನರೂ ಕೂಡ ಈಗ ಇದ್ದಾರೆ. ಯಾವ ದೇಶದಲ್ಲೇ ಆಗಲಿ ಪ್ರೊಚಾನ್ಸಲರಾಗಿ ಯೂನಿವರ್ಸಿಟಿ ಮಂತ್ರಿಗಳು ಯೂನಿವರ್ಸಿಟಿ ಮೇಲೆ ಒಂದು ಅಧಿಕಾರ ಚಲಾಯಿಸುವುದನ್ನು ನಾನು ಈ ನನ್ನ ಕಣ್ಣಿನಲ್ಲಿ ಎಂದೂ ನೋಡಿಲ್ಲ. ಪ್ರೊಚಾನ್ಸಲರ್‌ಗಿರಿಯನ್ನು ನಿಮ್ಮ ಸರ್ಕಾರದ ಮಂತ್ರಿಗಳಿಗೆ ಕೊಡುವುದಾದರೆ ಈ ಯೂನಿವರ್ಸಿಟಿ ಅಟಾನಮಸ್ಸಾಗಿ ಎಲ್ಲಿ ಇರುತ್ತದೆ? ಯೂನಿವರ್ಸಿಟಿಯವರಿಗೆ ಏನು ಪವರ್ಸ್ ಉಳಿಯುತ್ತದೆ? ಈಗ ಛಾನ್ಸಲರ್ ಅವರನ್ನು ಪ್ರೊಛಾನ್ಸಲರ್‌ಗೆ ಟ್ರಾನ್ಸ್‌ಫರ್ ಆಗಿದ್ದರೆ ಯೂನಿವರ್ಸಿಟಿಯನ್ನೇ ಮರೆತು ಹೋಗಬೇಕಾಗಿ ಬಂದಿದೆ. ಆದರೆ ಈಗ ಇರತಕ್ಕ ಡೈರೆಕ್ಟರ್ ಅವರ ಮೇಲೆ ವಿದ್ಯಾಮಂತ್ರಿಗಳು ಅಧಿಕಾರ ಮಾಡಿದರೆ ನಾನು ಬೇಡವೆಂದು ಹೇಳುವುದಿಲ್ಲ. ಇಂತಹ ಅವ್ಯವಸ್ಥೆಯನ್ನು ತಪ್ಪಿಸಬೇಕು, ಇನ್ನು ನಿಜವಾಗಿ ನ್ಯಾಯವಾದುದಲ್ಲವೆಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ, ಪಾಲಿಟೆಕ್‌ನಿಕ್‌ಗಳನ್ನು ಎಷ್ಟು ಬೇಕಾದರೂ ತೆಗೆಯಿರಿ. ಏಕೆಂದರೆ ಈಗ ಎಸ್. ಎಸ್. ಎಲ್. ಸಿ. ಆದಂತಹವರಿಗೆ ಕೇವಲ ಗುಮಾಸ್ತರ ಕೆಲಸವೂ ಸಿಕ್ಕುವುದಿಲ್ಲ.

ದಿನಕ್ಕೆ ನೂರಾರು ಮನೆಗಳನ್ನು ಅಲೆಯುತ್ತಿದ್ದಾರೆ. ಅಲ್ಲಲ್ಲ 10–20 ರೂಪಾಯಿಗಳನ್ನು ವಸೂಲಮಾಡಿಕೊಂಡು ಎಷ್ಟೋ ಹೊತ್ತು ಊಟಕ್ಕೆ ಸರಿಯಾಗಿಲ್ಲದೆ ಹೋಟಲ್‌ಗಳಲ್ಲಿದ್ದು ಕೊಂಡು ಕಾಲ ಕಳೆಯುತ್ತಿದ್ದಾರೆ. ಬಡವರ ಮಕ್ಕಳಂತೂ ಬಲು ಕಷ್ಟ. ಅಂತಹಮಕ್ಕಳು ಕಳ್ಳರಾಗುವುದಕ್ಕೆ ನೀವೇ ಕಾರಣರು. ಏಕೆಂದರೆ ಅವರಿಗೆ ಸರಿಯಾದ ವಿದ್ಯಾಭ್ಯಾಸವನ್ನು ನೀವೇ ಕೊಟ್ಟಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ಉದಾಹರಣೆ ಹೇಳಬೇಕಾಗಿದೆ. ನನ್ನ ಮನೆಯ ಅಂಗಳದಲ್ಲಿ ಒಂದು ಟ್ರಾಂಪೀಸ್ ಇಟ್ಟಿದೆ. ಅನೇಕ ಹುಡುಗರು ಕೆಲಸಕ್ಕಾಗಿ ನನ್ನನ್ನು ಕೇಳಲು ಮನೆಗೆ ಆಗಾಗ ಬರುತ್ತಿರುತ್ತಾರೆ. ಆದರೆ ನಾನೇನು ಆ ರೀತಿ ಎಲ್ಲರಿಗೂ ನೌಕರಿ ಗಳನ್ನು ಕೊಡುವುದಕ್ಕೆ ಏನಾದರೂ ಏಜೆನ್ಸಿ ಇಟ್ಟುಕೊಂಡಿದ್ದೇನೆಯೇ ? ಇಲ್ಲ. ಆದರೂ ಕೆಲಸ ಎಲ್ಲಾದರೂ ಕೊಡಿಸಿ ಎಂದು ಬರುತ್ತಿರುತ್ತಾರೆ, ಹೋಗುತ್ತಾ ಇರುತ್ತಾರೆ. ಒಂದು ದಿವಸ ಹೀಗೆಯೇ 5–6 ಜನ ಹುಡುಗರು ಬಂದು ಕೂತಿದ್ದರು. ನಾನು ಒಳಗೆ ಹೋಗಿ ಊಟ ಮಾಡಿ ಕೊಂಡು ಬರುವುದರಲ್ಲಿ ಆ ಗಡಿಯಾರವೇ ಪತ್ತೆ ಇಲ್ಲ. ಈ ಪರಿಸ್ಥಿತಿ ಏತಕ್ಕಾಗುತ್ತದೆ ಅಂದರೆ ಅದು ಅವರ ತಪ್ಪು ಅಲ್ಲ. ಅವರಿಗೆ ಸರಿಯಾದ ಉದ್ಯೋಗ ಶಿಕ್ಷಣವಿಲ್ಲ. ಅವರನ್ನು ಸರ್ಕಾರದ ವರು ಅಷ್ಟು ಬಡತನದಲ್ಲಿಟ್ಟಿರುವುದೇ ಕಾರಣ. ಸಾಮಾನ್ಯವಾಗಿರತಕ್ಕ ಕೇವಲ 20–25ರೂ ಪಾಯಿಗಳ ಗಡಿಯಾರದ ಕಳುವಿಗೆ ಯಾರು ಕಾರಣರು ಎಂದು ಹೇಳಬೇಕು ? ಆದ್ದರಿಂದ ಇನ್ನೂ ಮುಂದಾದರೂ ಸರ್ಕಾರದವರು ಹೆಚ್ಚಿಗೆ ಪಾಲಿಟೆಕ್‌ನಿಕ್ ಶಾಲೆಗಳನ್ನು ಪ್ರಾರಂಭಿಸಿ ಈ ಪ್ರೊಫೆಷನಲ್ ವಿದ್ಯಾಭ್ಯಾಸವನ್ನು ಸಾಕಷ್ಟು ಕೊಡುವುದರಿಂದ ಬಡವರ ಮಕ್ಕಳ ಕಷ್ಟ ಜೀವನ ನೀಗಿದಂತಾಗುತ್ತದೆ. ನೌಕರಿಗಳು ಬರೀ ಸರ್ಕಾರದಲ್ಲೇ ಸಾಗಬೇಕಾಗಿಲ್ಲ. ಇಂಡಿಯಾ ದೇಶದಲ್ಲಿ ಯಾವ ಭಾಗಕ್ಕೆ ಹೋದರೂ, ಇಂಡಿಯಾ ದೇಶವನ್ನೇ ಬಿಟ್ಟು ಹೋದರೂ ಜೀವನ ಮಾಡುವುದಕ್ಕೆ ಇದರಿಂದ ಅನುಕೂಲವಾಗುತ್ತದೆ. ಅಂತಹ ವಿದ್ಯಾಭ್ಯಾಸವನ್ನು ಈಗಿನ ಸಂದರ್ಭದಲ್ಲಿ ಕೊಡಬೇಕು. ಅದಕ್ಕಾಗಿ ಸರ್ಕಾರದವರು ಹೆಚ್ಚು ಹಣವನ್ನು ಖರ್ಚುಮಾಡ ಬೇಕು. ಇದರಲ್ಲಿ ಇಕಾನಮಿ ಮಾಡಬಾರದು. ಇದಕ್ಕೆ ತಗಲುವ ಖರ್ಚನ್ನು ವೇಸ್ಟ್ ಎಂದು ಪರಿಗಣಿಸಬಾರದು ಎಂದು ನಾನು ಸರ್ಕಾರದವರಿಗೆ ಹೇಳುತ್ತೇನೆ.

ಇನ್ನು ಕೈಗಾರಿಕೆಗಳ ವಿಚಾರದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಈ ಬಾಬಿಗೆ, ಇದುವರೆಗೂ ಡವಲಪ್‌ಮೆಂಟ್ ಸ್ಕೀಮುಗಳನ್ನು ಸೇರಿಸಿಕೊಂಡು ಸುಮಾರು 143 ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ್ದೀರಿ. ಆದರೆ ಅದರಿಂದ ನಮಗೆ ವರಮಾನ ಏನೇನು ಬರುತ್ತಾ ಇಲ್ಲ. ಏನಾದರೂ ಬರದಿದ್ದರೆ ಅದು ಬಹಳ ಅಲ್ಪವಾಗಿ ಕೆಲವು ಕಡೆ ಮಾತ್ರ ಬಂದಿರಬಹುದು. ಆದರೂ ಅನೇಕ ಕಡೆಗಳಲ್ಲಿ ನಷ್ಟವಾಗಿದೆ. ಇದಕ್ಕೆ ಕಾರಣವೇನೆಂದರೆ ನಮ್ಮ ಆಡಳಿತ ರೀತಿ ನೀತಿಗಳೆ ಸರಿಯಾಗಿಲ್ಲ. ನೀವು ಅಧಿಕಾರಿಗಳನ್ನು ಡೈರಕ್ಟರ್‌ಗಳನ್ನಾಗಿಯೂ, ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಡೈರಕ್ಟರುಗಳು ಸೆಕ್ರೆಟರಿಗಳು ಇನ್ನು ಬೇರೆ ಇತರ ಇಲಾಖೆ ಗಳ ಮುಖ್ಯಾಧಿಕಾರಿ—ಇವರುಗಳನ್ನು ಇಂಡಸ್ಟ್ರೀಸ್‌ಗಳನ್ನು ನೋಡಿಕೊಳ್ಳುವುದಕ್ಕೋಸ್ಕರ ಛೇರ್‌ಮೆನ್‌ರಾಗಿ ನೇಮಕ ಮಾಡಿದ್ದೀರಿ. ಹಣವನ್ನು ಈ ರೀತಿ ಉಳಿಸುವುದಕ್ಕೆ ಹೋಗಿದ್ದೀರಿ. ಇದರಿಂದ ಖಂಡಿತವಾಗಿ ಹಣಉಳಿಯುವುದಿಲ್ಲ. ಎಲ್ಲಿ ಹಣ ಉತ್ಪತ್ತಿ ಬರಬಹುದೋ ಅಂತಹ ಕಡೆ ನಿಮ್ಮ ಪಾಲಸಿಯೇ ಸರಿಯಾಗಿಲ್ಲ. ಇದರಿಂದ ಕೈಗಾರಿಕೆಗಳೆಷ್ಟೋ ನಾಶವಾಗುತ್ತಿವೆ. ಪ್ರಯೋಜನವಿರುವುದಿಲ್ಲ. ಇಲಾಖೆಯ ಮುಖ್ಯಾಧಿಕಾರಿಗಳನ್ನು ಸೆಕ್ರೆಟರಿಯಾಗಿ ಡೈರೆಕ್ಟರ್ ಆಗಿ, ಅಥವಾ ಛೇರ್‌ಮೆನ್‌ರಾಗಿ ಅನೇಕ ಕೈಗಾರಿಕೆಗಳಿಗೆ ನೇಮಿಸಿದರೆ, ನಿಜವಾಗಿ ಅವರು ಅಲ್ಲಿ ಹೋಗಿ ಎಷ್ಟೋ ದೂರದಲ್ಲಿರತಕ್ಕ ಕೈಗಾರಿಕೆಗಳನ್ನು ನೋಡುವುದಕ್ಕಾಗುತ್ತದೆಯೇ ? ಅಥವಾ ಅವರು ಅಲ್ಲಿಯೇ ಇದ್ದು ಕೆಲಸಮಾಡಿ ಹೆಚ್ಚಿಗೆ ಉತ್ಪತ್ತಿಯನ್ನು ತರುವುದಕ್ಕೆ ಅಂತಹ ಶಕ್ತಿಯನ್ನು ಪಡೆಯುತ್ತಿದ್ದಾರೆಯೇ, ಮತ್ತು ಇಲ್ಲಿ ಎರಡು ಹೆತ್ತು ಆಫೀಸಿನಲ್ಲಿರ ತಕ್ಕ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ನಡೆಸಲು ಸಾಧ್ಯವೇ ? ಎಂಬುದನ್ನು ಸರ್ಕಾರ

(ಶ್ರೀ ಬಿ. ಕೆ. ಪುಟ್ಟರಾಮಯ್ಯ)

ದವರು ವಿಚಾರ ಮಾಡಿ ನೋಡಬೇಕು. ಇದರಿಂದಲೇ ಆಫೀಸುಗಳ ಎಫಿಷಯನ್ಸಿ ಇತ್ತೀಚೆಗೆ ಬಹಳವಾಗಿ ಹೋಗುತ್ತಿದೆ. ಸಾಮಾನ್ಯವಾಗಿ ಕೈಗಾರಿಕೆ ಇಲಾಖೆಗಳ ಕಾರ್ಯದರ್ಶಿಯನ್ನು ಯಾವುದಾದರೂ ಒಂದು ಕಾರ್ಖಾನೆಗೆ ಚೇರ್‌ಮೆನ್ನಾಗಿ ನೇಮಕ ಮಾಡಿದರೆ ಆತ ನಿಜವಾಗಿ ಸೆಕ್ರೆಟರಿ ಕೆಲಸ ಎಲ್ಲಿ ಮಾಡುವುದು, ಅಲ್ಲಿ ಹೋಗಿ ಆ ಕೈಗಾರಿಕೆಯನ್ನು ಉದ್ಧಾರಮಾಡುವುದು ಹೇಗೆ ? ಆದ್ದರಿಂದ ಪ್ರತಿಯೊಂದು ಕೈಗಾರಿಕೆಗೂ ಒಬ್ಬೊಬ್ಬ ನಿಸ್ಪೃಹರಾದ ಮತ್ತು ಅನುಭವಸ್ಥರಾದ ರಿಟೈರ್ಡ್ ಆಫೀಸರುಗಳನ್ನು ಸುಲಭವಾದ ಆನರೇರಿಯಂ ಕೊಡುವ ಮೂಲಕ ನೇಮಕ ಮಾಡಬೇಕು. ಅವರಿಗೆ ಸಾವಿರ ರೂಪಾಯಿಗಳ ಸಂಬಳ ಬೇಕಿಲ್ಲ. ಅವರ ಉತ್ತಮ ಅನುಭವನ್ನು ಕೈಗಾರಿಕೆಗಳಿಗೋಸ್ಕರ ಉಪಯೋಗಿಸಿಕೊಂಡು ಆ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಿಸಿದರೆ ಕೋಟ್ಯಾಂತರ ರೂಪಾಯಿಗಳ ಲಾಭ ಬರುತ್ತದೆ. ಅಂಥಾದ್ದನ್ನು ಮಾಡುವುದಕ್ಕೆ ಆಡಳಿತ ಪಕ್ಷದವರಿಗೆ ಆಲೋಚನೆ, ಮನಸ್ಸು ಇದ್ದರೂ ಕೂಡ ಆ ಕಡೆ ಗಮನವನ್ನೆ ಕೊಡುತ್ತಿಲ್ಲ. ಅದೇನು ಕಾರಣವೋ ಗೊತ್ತಿಲ್ಲ. ಇದರಿಂದ ಈಗ ಏನಾಗುತ್ತಿದೆಯೆಂದರೆ ಈ ಇಲಾಖೆ ಮುಖ್ಯಾಧಿಕಾರಿಗಳು ಟೂರಿಂಗ್ ಆಫೀಸರ್ಸ್ ಆಗಿ ಟೂರ್ ಮಾಡಬೇಕು ಇಲ್ಲ ಆಫೀಸನ್ನು ನೋಡಬೇಕು, ಕೈಗಾರಿಕೆಯನ್ನೂ ಸಹ ನೋಡಬೇಕು ಎಂದು ಹೇಳಿದರೆ ಇವು ಮೂರನ್ನು ಆತ ಒಬ್ಬ ನೋಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದರೆ ನಿಮ್ಮ ಈಗಿನ ಡೈರಕ್ಟರುಗಳು ದಡ್ಡರು ಶಕ್ತಿಯಿಲ್ಲದವರು ಎಂದು ನಾನು ಹೇಳುವುದಿಲ್ಲ. ಕೆಲವು ಇಲಾಖೆಗಳ ಇನ್‌ಎಫಿಷಯೆನ್ಸಿಗೆ ನೀವೇ ಕಾರಣರು, ಜವಾಬ್ದಾರರು ಎಂದು ಹೇಳುತ್ತೇನೆಯೇ ವಿನಹ ಅಧಿಕಾರಿಗಳಲ್ಲವೆಂದು ಮತ್ತೊಮ್ಮೆ ತಿಳಿಸಬೇಕಾಗಿದೆ. ಸುಮಾರು 3-4 ವರ್ಷಗಳ ಹಿಂದೆ ಈ ವಿಷಯದಲ್ಲಿ ಚೀಫ್ ಸೆಕ್ರೆಟರಿ ಮತ್ತು ಫೈನಾನ್ಸಿಯಲ್ ಸೆಕ್ರೆಟರಿ ಇದ್ದಂತಹ ಒಂದು ಕಮಿಟಿ ರಚನೆಯಾಗಿತ್ತು. ಆಗ ಅವರು ಒಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು ಅವರು ನಾನು ಈಗ ಹೇಳಿದ್ದನ್ನೇ ಹೇಳಿದ್ದಾರೆ. ಅವರು ಕೆಲವು ಸಲಹೆಗಳನ್ನು ಆ ರೀತಿ ಕೊಟ್ಟಿದ್ದರೂ. ನಾವು ಎಷ್ಟೋಸಾರಿ ನಮ್ಮ ಅಭಿಪ್ರಾಯಗಳನ್ನು ಈ ವಿಷಯದಲ್ಲಿ ಈ ಸಭೆಯಲ್ಲಿ ಕೊಟ್ಟಿದ್ದರೂ ಆ ಕಮಿಟಿಗಳ ಅಭಿಪ್ರಾಯಕ್ಕೂ ನಮ್ಮ ಸಲಹೆಗಳಿಗೂ ಆಡಳಿತ ಪಕ್ಷದವರು ಯಾವ ರೀತಿಯಲ್ಲೂ ಬೆಲೆ ಕೊಡುತ್ತಿಲ್ಲ. ಸಮರ್ಥರಾದ ರಿಟೈರ್ಡ್ ಆಫೀಸರುಗಳಿಗೆ ತಿಂಗಳಿಗೆ 300-400 ರೂಪಾಯಿ ಕೊಟ್ಟು ಒಬ್ಬೊಬ್ಬರನ್ನು ಒಂದೊಂದು ಫ್ಯಾಕ್ಟರಿಗೆ ಹಾಕಿ, ಒಂದು ಸಂಸ್ಥೆಯ ಕೆಲಸಕ್ಕೆ ಒಬ್ಬ ಅಧಿಕಾರಿ ತನ್ನ ಪೂರ್ತಿ ಟೈಮನ್ನು, ನಿಗವನ್ನು ಕೊಡುವ ಹಾಗಿರಬೇಕು. ಸೂರ್ಯನಾರಾಯಣರಾಯರೇ, ಈ ವಿಷಯವನ್ನು ನಿಮ್ಮ ಪಾರ್ಟಿಮೀಟಿಂಗಿನಲ್ಲಿ ತಂದಿದ್ದೀರಾ? ನಾವು ಈ ಫ್ಯಾಕ್ಟರಿಗಳ ಸರಿಯಾದ ಮೇನೇಜ್‌ಮೆಂಟಿಗೆ ಒಂದು ವ್ಯವಸ್ಥೆಮಾಡಿ ಎಂದು ಮಂತ್ರಿಗಳಿಗೆ ಹೇಳುತ್ತಿದ್ದರೆ ನೀವು ಅವರನ್ನು ಇಲ್ಲಿಯೂ ಕೇಳುವುದಕ್ಕೆ ಬಿಡುತ್ತಿಲ್ಲ. ನಾವು ಇಲ್ಲಿ ಸುಮ್ಮನೆ ಭಾಷಣ ಮಾಡುವುದಕ್ಕೆ ಬಂದಿದ್ದೇವೆಯೆ? ನಮ್ಮನ್ನು ಜನ ಇಲ್ಲಿಗೆ ಕಳುಹಿಸಿದ್ದಾರೆ, ಎಷ್ಟುದಿವಸ ನಾವು ಇಲ್ಲಿರುತ್ತೇವೆಯೋ? ಅಷ್ಟುದಿವಸ ನಾವು ಅವರ ಸೇವೆಮಾಡಿ ಹೋಗಬೇಕೆಂದು ಬಂದವರು ನಾವು ಸುಮ್ಮನೆ ಭಾಷಣ ಮಾಡುವುದಕ್ಕೆ ಇಲ್ಲಗೆ ಬಂದಿಲ್ಲ. ನಾವು ಹೇಳಿದ್ದನ್ನು ಮಂತ್ರಿಗಳು ತಮ್ಮ ತಲೆಯಲ್ಲಿ ಹಾಕಿಕೊಳ್ಳಲಿ ಎಂದು ಹೇಳುತ್ತಿದ್ದೇನೆ ಸೂರ್ಯನಾರಾಯಣರಾಯರು ಮಂತ್ರಿಗಳಾಗಲಿ ಬೇಡವೆನ್ನುವುದಿಲ್ಲ, ಇನೊಂದು ಸಲ ತೆಗೆದುಕೊಂಡಾಗ 21ನೆಯ ಮಂತ್ರಿಗಳಾಗಲಿ ಆದರೆ ಇವತ್ತು ಅಲ್ಲಿ ಕೂತುಕೊಂಡು ಮಂತ್ರಿಗಳ ಗಮನವನ್ನು ಬೇರೆ ಕಡೆ ಸೆಳೆಯುವುದು ಬೇಡ.

ನೀವು ಇಂಡಸ್ಟ್ರಿಯಲ್ ಡೆವಲಪ್‌ಮೆಂಟಿನಲ್ಲಿ ತೋರಿಸುತ್ತಿರುವ ಲಾಭನಷ್ಟ ಸರಿಯಾದುದಲ್ಲ. ನೀವು ಲೆಕ್ಕಹಾಕಿರುವ ಫಿಗರ್ ಮಕ್ಕಳಿಗೆ ಲೆಕ್ಕಹಾಕಿ ಹೇಳಿದಹಾಗಿದೆ. ಈ ಇಂಡಸ್ಟ್ರಿಗಳನ್ನು ರಿಆರ್ಗನೈಜ್ ಮಾಡಬೇಕು. ಪ್ರತಿಯೊಬ್ಬ ಫ್ಯಾಕ್ಟರಿಗೂ ಒಬ್ಬೊಬ್ಬ ಚೇರ್‌ಮನ್ ಇರಬೇಕು? ಅವರಿಗೆ ಏನಾದರು ಸ್ವಲ್ಪ ಆನರೇರಿಯಮ್‌ಕೊಡಿ. ಆಗ ಅವುಗಳ ಬೆಳೆವಣಿಗೆಗೆ ಹೆಚ್ಚು ಸಹಕಾರಿಯಾಗಿರುತ್ತದೆ ಈ ಡಿಮ್ಯಾಂಡಿನ ಮೇಲೆ ಸದ್ಯಕ್ಕೆ ಇಷ್ಟು ಹೇಳಿ ಬಿಡುತ್ತೇನೆ.

ರೂರಲ್ ಡೆವಲಪ್‌ಮೆಂಟ್ ದೇಶಕ್ಕೆ ಬಹಳ ಪ್ರಾಮುಖ್ಯವಾದುದು, ಎಲ್ಲಾ ಡಿಪಾರ್ಟ್‌ಮೆಂಟುಗಳಿಗೂ ಹೆಚ್ಚಾಗಿ ಹಣ ಕೊಟ್ಟು ಈ ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿಗೆ ಬಹಳ ಹಣ ಖೋತಮಾಡಿದ್ದೀರಾ? ಏಕೆ ಖೋತಮಾಡಿದ್ದೀರಾ ಎನ್ನುವುದನ್ನು ವಿಶದವಾಗಿ ನಿಮ್ಮ ಭಾಷಣದಲ್ಲಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ, ನೀವು ಈ ಡಿಪಾರ್ಟ್‌ಮೆಂಟಿಗೆ, ಹಣ ಖೋತ ಮಾಡಿರುವುದು ಸಾಧ್ಯವಾದುದಲ್ಲ. ಈ ಡಿಪಾರ್ಟ್‌ಮೆಂಟಿಗೆ ಹೋದವರ್ಷ ಏನು ಖರ್ಚು ಮಾಡಿದ್ದರೋ ; ಅದರ ಎರಡರಷ್ಟು ಖರ್ಚು ಮಾಡಬೇಕೆಂದು ಹೇಳಿದ್ದೆವು ಸಾಮಾನ್ಯ ಜನರಿಗೆ ಅನುಕೂಲವಾಗುವಂಥ ರೂರಲ್ ಡೆವಲಪ್‌ಮೆಂಟಿಗೆ ಹೆಚ್ಚು ಹಣ ಒದಗಿಸಬೇಕಾಗಿತ್ತು. ಹಳ್ಳಿಗಾಡಿನಿಂದ ಬಂದಿರತಕ್ಕಂಥ ಹಣಕಾಸಿನ ಸಚಿವರು, ಈ ಬಾಬಿಗೆ ಏತಕ್ಕೆ ಖೋತ ಹಾಕಿದರು ಎನ್ನುವುದು ಆಶ್ಚರ್ಯವಾಗುತ್ತದೆ.

ಷೆಡ್ಯೂಲ್ಡ್ ಕ್ಯಾಸ್ಟ್‌ನ ಮತ್ತು ಶೆಡ್ಯೂಲ್ಡ್ ಟ್ರೈಬುಗಳ ಅಭಿವೃದ್ಧಿಗೆ ಏನು ಹಣ ಖರ್ಚು ಮಾಡುತ್ತಿದ್ದೀರೋ, ಆ ವಿಷಯದಲ್ಲಿ ನಿಮ್ಮ ತತ್ವ ಧ್ಯೇಯಗಳು ಬದಲಾವಣೆಯಾಗಬೇಕು ಗಾಂಧಿಜಿಯವರು, ಇಂಡಿಯಾ ದೇಶದಲ್ಲಿ ಸ್ವಾತಂತ್ರ್ಯ ಬಂದಿದೆ ಎಂದು ಹೇಳಬೇಕಾದರೆ, ಶೆಡ್ಯೂಲ್ಡ್ ಕ್ಯಾಸ್ಟ್ಸ್ ಅಂದರೆ ಹರಿಜನರು ಎಂದು ಏನಿದ್ದಾರು ಅವರಿಗೆ ಸ್ವಾತಂತ್ರ ಬಂದ ದಿವಸ ಇಂಡಿಯ ದೇಶ ಪೂರ್ಣ ಸ್ವಾತಂತ್ರವಾಯಿತು ಎಂದು ಹೇಳಬಹುದು ಎಂದು ಹೇಳಿದ್ದಾರೆ ಮಹಾತ್ಮ ಗಾಂಧಿಯವರು ವಾದವನ್ನು ಹೇಳುತ್ತಿರುವಾಗ ನನ್ನ ಸ್ನೇಹಿತರಾದ ಕೆಲವು ಅಸೆಂಬ್ಲಿ ಮೆಂಬರುಗಳಲ್ಲಿ ನಗು ಬರುತ್ತಿದೆ, ಯಾರನ್ನು ಹೀನದೃಷ್ಟಿಯಿಂದ ನಿಕೃಷ್ಟ ಭಾವನೆಯಿಂದ ನೋಡುತ್ತಿದ್ದಾರೋ ಅಜನಾಂಗದವರು ಇತರರೆಲ್ಲರಿಗೂ ಸಾಮಾನರು ಎಂಬ ನಿಜವಾದ ಭಾವನೆ ಬಂದು ಅವರನ್ನು ಸಹೋದರ ಭಾವನೆಯಿಂದ ನೋಡುವ ಕಾಲ ಬಂದಾಗ ಇಂಡಿಯಾ ದೇಶದವರಲ್ಲಿ ಒಂದು ಗುಣವಿದೆಯೆಂದು ಹೇಳಬಹುದು. ಮೊನ್ನೆ ತಾನೆ ಆಂಧ್ರದ ಮುಖ್ಯಮಂತ್ರಿಗಳು ಹರಿಜನರು ಮತ್ತು ಗಿರಿಜನರ ಕಲ್ಯಾಣಕ್ಕಾಗಿ ಕೆಲವು ನಿರ್ಧಾರಗಳನ್ನು ಆಂಧ್ರ ಸರ್ಕಾರ ತೆಗೆದುಕೊಂಡಿದೆ ಎಂದು ಹೇಳಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿದೆ, ಆಂಧ್ರರಾಜ್ಯದಲ್ಲಿ ಕೊಡಬೇಕೆಂದಿರುವ ಎಲ್ಲಾ ರಿಯಾಯಿತಿಗಳನ್ನು ಎಲ್ಲಾ ಸೌಲಭ್ಯಗಳನ್ನೂ ರಿಯಾಯಿತಿಗಳನ್ನೂ ನಮ್ಮ ಸರ್ಕಾರದವರು ಒಪ್ಪಿಕೊಂಡು ಅವುಗಳನ್ನು ನಮ್ಮ ರಾಜ್ಯದ ಹರಿಜನರಿಗೆ ಒದಗಿಸುತ್ತೇವೆಂದು ಡಿಕ್ಲೇರ್ ಮಾಡಿಕೊಳ್ಳಬೇಕೆಂದು ಒತ್ತಾಯ ಮಾಡಿ ಹೇಳುತ್ತೇನೆ.

